ಕನ್ನಡ ಸಂಸ್ಕೃತಿ ಅರಳಲಿ

ಕನ್ನಡ ಕಹಳೆ ಮೊಳಗಲಿ

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ




**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

## ಕರ್ನಾಟಕ ಗಡಿಭಾಗದ ಕನ್ನಡಿಗರ ಸಮಗ್ರ ಕಲ್ಯಾಣದತ್ತ ಪ್ರಾಧಿಕಾರದ ದೃಢ ಸಂಕಲ್ಪ



**ಶ್ರೀ ವಿ. ಸುನೀಲ್ ಕುಮಾರ್**
ಸನ್ಮಾನ್ಯ ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು


# ಮಾಹಿತಿ ಕೈಪಿಡಿ



**ಡಾ. ಸಿ. ಸೋಮಶೇಖರ,** ಭಾ.ಆ.ಸೇ (ನಿ)
ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು



# ನಾಡಗೀತೆ



ಜಯ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋಷಿಗಳ ಬೀಡೆ.

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ.
ರಾಘವ ಮಧುಸೂಧನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೇ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.


ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ.
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ.
ಕುಮಾರವ್ಯಾಸರ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ.

ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ.
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.

ಸರ್ವಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ.

ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ.
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ.
ಜಯ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ.

**– ರಾಷ್ಟ್ರಕವಿ ಕುವೆಂಪು**



**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು

# ಸಂದೇಶ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು 2010 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಕರ್ನಾಟಕ ಗಡಿ ಭಾಗದಲ್ಲಿನ ಕನ್ನಡಿಗರ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಗತ್ಯತೆಗಳನ್ನು ತನ್ನ ಇತಿ ಮಿತಿಯಲ್ಲಿ ಪೂರೈಸುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಾ ಬಂದಿದೆ. ಕರ್ನಾಟಕದ ಗಡಿ ಭಾಗದಲ್ಲಿನ ಕನ್ನಡಿಗರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಹಾಗೂ ಕರ್ನಾಟಕಕ್ಕೆ ಹೊಂದಿಕೊಂಡಿರುವ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು, ಆಂಧ್ರ, ತೆಲಂಗಾಣ ರಾಜ್ಯಗಳಲ್ಲಿನ ಗಡಿ ಭಾಗದ ಕನ್ನಡಿಗರ ಸಮಗ್ರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಸಹಾ ಪ್ರಾಧಿಕಾರದ ಕರ್ತವ್ಯವಾಗಿದೆ.

ಕರ್ನಾಟಕದ ಗಡಿ ಭಾಗದಲ್ಲಿ ಸಾಂಸ್ಕೃತಿಕ ಭವನ, ಕನ್ನಡ ಭವನ ನಿರ್ಮಾಣ, ಕನ್ನಡ ಕಲಿಸುವ ಸರ್ಕಾರಿ ಹಾಗೂ ಖಾಸಗಿ ಕನ್ನಡ ಶಾಲೆಗಳ ಕೊಠಡಿಗಳು, ಶೌಚಾಲಯಗಳ ನಿರ್ಮಾಣ ಮುಂತಾದ ಕಾರ್ಯಗಳ ಜೊತೆಗೆ ಗಡಿ ಭಾಗದಲ್ಲಿನ ಕನ್ನಡ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಪೀಠೋಪಕರಣ ಪೂರೈಕೆ ಮುಂತಾದ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ಪ್ರಾಧಿಕಾರವು ನಿರಂತರವಾಗಿ ಮಾಡುತ್ತಾ ಬಂದಿರುವುದು ಸಂತಸದ ವಿಷಯವಾಗಿದೆ.

ಅಂತೆಯೇ ಕರ್ನಾಟಕದ ಗಡಿ ಭಾಗದಲ್ಲಿ ಮತ್ತು ಕರ್ನಾಟಕಕ್ಕೆ ಹೊಂದಿಕೊಂಡಿರುವ ನೆರೆ ರಾಜ್ಯಗಳಲ್ಲಿ ಕನ್ನಡ ಸಾಂಸ್ಕೃತಿಕ ಉತ್ಸವಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ವ್ಯವಸ್ಥೆ ಮಾಡುವ ಮೂಲಕ ಗಡಿ ಭಾಗದಲ್ಲಿ ಕನ್ನಡ ಜಾಗೃತಿ ಉಂಟುಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಪ್ರಾಧಿಕಾರವು ನಿರಂತರವಾಗಿ ಮಾಡುತ್ತಾ ಬಂದಿದೆ. ಗಡಿ ಭಾಗದ ಕನ್ನಡಿಗರು ಬಹುಭಾಷೆಯ ಹಾಗೂ ಬಹುಸಂಸ್ಕೃತಿ ಹಾಗೂ ಸಾಮರಸ್ಯದ ಜೊತೆಗೆ ತಮ್ಮ ದೈನಂದಿನ ಬದುಕನ್ನು ಯಾವುದೇ ಸಂಘರ್ಷವಿಲ್ಲದೆ ನಡೆಸುವಂತಾಗಲು ಪ್ರಾಧಿಕಾರವು ಹೆಚ್ಚು ಹೆಚ್ಚು ಭಾಷಾ ಸಾಮರಸ್ಯ ಮೂಡಿಸುವಂತಹ ಯೋಜನೆಗಳನ್ನು ಸಹಾ ರೂಪಿಸುವುದು ಅಪೇಕ್ಷಣೀಯವಾಗಿದೆ.

ಪ್ರಾಧಿಕಾರದ ಸೃಜನಶೀಲ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕ್ರಿಯಾಶೀಲ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ರವರನ್ನು ಅಭಿನಂದಿಸುತ್ತೇನೆ. ಈ ಸಂದರ್ಭದಲ್ಲಿ ಕರ್ನಾಟಕದ ಗಡಿ ಭಾಗದ ಹಾಗೂ ನೆರೆ ರಾಜ್ಯಗಳ ಗಡಿ ಭಾಗದ ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ನಮ್ಮ ಸರ್ಕಾರವು ಎಲ್ಲಾ ರೀತಿಯ ಸಹಕಾರ ನೀಡುತ್ತದೆ ಎಂಬ ಭರವಸೆಯನ್ನು ನೀಡಬಯಸುತ್ತೇನೆ ಹಾಗೂ ಗಡಿ ಭಾಗದ ಎಲ್ಲಾ ಕನ್ನಡ ಬಂಧುಗಳಿಗೆ ಸರ್ಕಾರದ ಪರವಾಗಿ ಶುಭವನ್ನು ಕೋರುತ್ತೇನೆ.

(ಬಸವರಾಜ ಎಸ್. ಬೊಮ್ಮಾಯಿ)

# ಹಚ್ಚೇವು ಕನ್ನಡದ ದೀಪ



ಹಚ್ಚೇವು ಕನ್ನಡದ ದೀಪ
ಕರುನಾಡ ದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವ ದೀಪ

ಬಹುದಿನಗಳಿಂದ ಮೈಮರೆವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು ಸೂಸಲು
ಅಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು
ಮರೆತೇವು ಮರವ ತೆರೆದೇವು ಮನವ
ಎರೆದೇವು ಒಲವ ಹಿರಿನೆನಪಾ
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ.

ಕಲ್ಪನೆಯ ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯರೂಪ
ಅಚ್ಚಳಿಯದಂತೆ ತೋರೇವು
ಒಡಲೊಳಲ ಕೆಚ್ಚಿನ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು
ಹೊಮ್ಮಿರಲು ಪ್ರೀತಿ ಎಲ್ಲಿನದು ಭೀತಿ
ನಾಡೊಲವೆ ನೀತಿ ಹಿಡಿನೆನಪಾ
ಮನೆಮನೆಗಳಲ್ಲಿ ಮನಮನಗಳಲ್ಲಿ ಹಚ್ಚೇವು
ಕನ್ನಡದ ದೀಪ.

ನಮ್ಮವರು ಗಳಿಸಿದ ಹೆಸರುಳಿಸಲು
ಎಲ್ಲಾರು ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು
ತೊರೆದೇವು ಮರುಳ ಕಡೆದೇವು ಇರುಳ
ಪಡೆದೇವು ತಿರುಳ ಹಿರಿನೆನಪಾ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ
ಹಚ್ಚೇವು ಕನ್ನಡದ ದೀಪ

**– ಡಿ. ಎಸ್. ಕರ್ಕಿ**



**ಶ್ರೀ ವಿ. ಸುನೀಲ್ ಕುಮಾರ್**
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಖಾತೆ ಸಚಿವರು

# ಸಂದೇಶ

ಕರ್ನಾಟಕ ಗಡಿ ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಿಂದ 2010 ರಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ಗಡಿ ಭಾಗದಲ್ಲಿನ ಕನ್ನಡಿಗರ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬದುಕು ಹಸನಾಗುವ ದಿಸೆಯಲ್ಲಿ ಪ್ರಾಧಿಕಾರವು ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಾ ಬಂದಿದೆ. ಕರ್ನಾಟಕದ ಗಡಿ ಭಾಗದಲ್ಲಿ ಕನ್ನಡದ ಸಂರಕ್ಷಣೆಯೊಂದಿಗೆ ಕರ್ನಾಟಕಕ್ಕೆ ಹೊಂದಿಕೊಂಡಿರುವ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು, ಆಂಧ್ರ, ಮತ್ತು ತೆಲಂಗಾಣ ರಾಜ್ಯಗಳಲ್ಲಿನ ಗಡಿ ಭಾಗದಲ್ಲಿಯೂ ಕನ್ನಡದ ರಕ್ಷಣೆ ಮತ್ತು ಕನ್ನಡಿಗರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಪ್ರಾಧಿಕಾರದ ಮೂಲ ಧ್ಯೇಯವಾಗಿರುತ್ತದೆ.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಗೆ ಬರುವ 19 ಜಿಲ್ಲೆಗಳ 63 ಗಡಿ ತಾಲ್ಲೂಕುಗಳಲ್ಲಿ ಹಾಗೂ ಕರ್ನಾಟಕಕ್ಕೆ ಹೊಂದಿಕೊಂಡಿರುವ ನೆರೆ ರಾಜ್ಯಗಳಲ್ಲಿ ಕನ್ನಡ ಪರ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯ ಯೋಜನೆಗಳನ್ನು ರೂಪಿಸುವ ಮೂಲಕ ಕರ್ನಾಟಕದ ಗಡಿ ಭಾಗದ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆಯನ್ನು ಹೆಚ್ಚು ಜಾಗೃತಗೊಳಿಸುವುದರ ಜೊತೆಗೆ ಕನ್ನಡದ ಪರಿಸರವನ್ನು ಸೃಷ್ಟಿ ಮಾಡುವಲ್ಲಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶ ಹೊಂದಿರುತ್ತದೆ.

ನಮ್ಮ ಕರ್ನಾಟಕ ಸರ್ಕಾರವು ಗಡಿ ಭಾಗದ ಕನ್ನಡಿಗರ ಜೊತೆಗೆ ಸದಾಕಾಲ ಭಾವನಾತ್ಮಕವಾಗಿ ಅವರ ಭಾವನೆಗಳಿಗೆ ಸ್ಪಂದಿಸುತ್ತಾ ಬಂದಿರುತ್ತದೆ. ಮುಂದೆಯೂ ಗಡಿ ಭಾಗದ ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡುವ ದಿಸೆಯಲ್ಲಿ ನಾವು ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ ಎಂಬ ಭರವಸೆಯನ್ನು ನೀಡ ಬಯಸುತ್ತೇನೆ. ಪ್ರಾಧಿಕಾರವು ಗಡಿ ಭಾಗದ ಕನ್ನಡಿಗರ ಹಿತ ಕಾಪಾಡುವಲ್ಲಿ ಕೈಗೊಳ್ಳುವ ಎಲ್ಲಾ ಯೋಜನೆಗಳಿಗೆ ನಾನು ಶುಭ ಹಾರೈಸುತ್ತೇನೆ. ಪ್ರಾಧಿಕಾರದ ಯೋಜನೆಗಳನ್ನು ಬದ್ಧತೆಯಿಂದ ಅನುಷ್ಠಾನಕ್ಕೆ ತರುತ್ತಿರುವ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ರವರನ್ನು ಅಭಿನಂದಿಸುತ್ತೇನೆ. ಮತ್ತೊಮ್ಮೆ ಗಡಿ ಭಾಗದ ಎಲ್ಲಾ ಕನ್ನಡ ಮಿತ್ರರಿಗೆ ವೈಯಕ್ತಿಕವಾಗಿ ಮತ್ತು ಸರ್ಕಾರದ ಪರವಾಗಿ ಶುಭಾಶಯಗಳನ್ನು ಕೋರುತ್ತೇನೆ.

(ಸುನೀಲ್ ಕುಮಾರ್)



**ಡಾ. ಸಿ. ಸೋಮಶೇಖರ,** ಭಾ.ಆ.ಸೇ (ನಿ)
ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

# ನಿವೇದನೆ

ಕರ್ನಾಟಕದ ಗಡಿ ಭಾಗದಲ್ಲಿನ ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಸಮಗ್ರ ವಿಕಾಸದ ಮಹೋನ್ನತವಾದ ಉದ್ದೇಶದಿಂದ ನಾಡಿನ ಕನ್ನಡಪರ ಹಿರಿಯ ಚಿಂತಕರ ಆಶಯದಂತೆ ಹಾಗೂ ಗಡಿನಾಡ ಅಧ್ಯಯನ ಆಯೋಗದ ಶಿಫಾರಸ್ಸಿನಂತೆ 2010 ರಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ಸ್ಥಾಪಿಸಿದ್ದು, ಗಡಿನಾಡ ಕನ್ನಡಿಗರ ಹಿತಾಸಕ್ತಿಯ ದೃಷ್ಟಿಯಿಂದ ಇದೊಂದು ಐತಿಹಾಸಿಕ ಹೆಜ್ಜೆಯಾಗಿದೆ. ಕನ್ನಡ ಅಸ್ಮಿತೆಯು ಈ ಭಾಗದಲ್ಲಿ ಗಟ್ಟಿಯಾಗಿ ಕನ್ನಡಿಗರ ಮನೆ–ಮನಗಳಲ್ಲಿ ನೆಲೆಗೊಳ್ಳಬೇಕೆಂಬುದೇ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆಯ ಹಿನ್ನಲೆಯಲ್ಲಿನ ಸದಾಶಯವಾಗಿದೆ.

ಕರ್ನಾಟಕ ರಾಜ್ಯದ 19 ಜಿಲ್ಲೆಗಳು ಹಾಗೂ 63 ತಾಲ್ಲೂಕುಗಳಿಗೆ ವ್ಯಾಪಿಸಿರುವ ಕರ್ನಾಟಕದ ಗಡಿ ಭಾಗಗಳು ಹಾಗೂ ಕರ್ನಾಟಕದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು, ಆಂಧ್ರ, ಮತ್ತು ತೆಲಂಗಾಣ ರಾಜ್ಯಗಳಲ್ಲಿನ ಗಡಿ ಭಾಗಗಳಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿರುವ ಕನ್ನಡಿಗರಿಗೆ ಹಾಗೂ ಕನ್ನಡ ಪರ ಸಂಘ ಸಂಸ್ಥೆಗಳಿಗೆ ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅಲ್ಲಿನ ಜನರಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಅಭಿಮಾನ ಮತ್ತು ಗೌರವ ಮೂಡುವಂತೆ ಮಾಡುವ ದಿಸೆಯಲ್ಲಿ ಪ್ರಾಧಿಕಾರವು ಸ್ಥಾಪನೆಯಾದಂದಿನಿಂದ ಇಲ್ಲಿಯವರೆಗೆ ತನ್ನ ಆರ್ಥಿಕ ಇತಿಮಿತಿಯಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತಾ ಬಂದಿದೆ.

ಕನ್ನಡ ನಾಡು–ನುಡಿಯ ಬಗ್ಗೆ ಅಪಾರ ಅಭಿಮಾನವುಳ್ಳ ಕನ್ನಡ ಸಾಹಿತ್ಯ ಅಭಿಮಾನಿಗಳಾದ ನಮ್ಮ ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್ ಬೊಮ್ಮಾಯಿ ಅವರು ಪ್ರಾಧಿಕಾರಕ್ಕೆ ತಮ್ಮ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ನೀಡುವ ಬಗ್ಗೆ ಭರವಸೆ ನೀಡಿದ್ದಾರೆ. ಅವರಿಗೆ ನಾನು ಪ್ರಾಧಿಕಾರದ ಪರವಾಗಿ ವಿಶೇಷವಾಗಿ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಅಂತೆಯೇ ನಮ್ಮ ಕರ್ನಾಟಕ ಸರ್ಕಾರದ ಇಂಧನ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಪ್ರಾಧಿಕಾರದ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬಂದಿದ್ದಾರೆ. ಅವರಿಗೂ ನಾನು ಗೌರವ ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸಬಯಸುತ್ತೇನೆ.

ನಮ್ಮ ಪ್ರಾಧಿಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಸಹಕಾರ ತೀರಾ ಅತ್ಯಗತ್ಯ. ಅಂತೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಸ್ಕೃತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮಿತ್ರರ ಸಹಯೋಗವು ಬಹಳ ಮುಖ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅವರೆಲ್ಲರಿಗೂ ಪ್ರಾಧಿಕಾರದ ಪರವಾಗಿ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ನಮ್ಮ ಪ್ರಾಧಿಕಾರದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ನನ್ನ ಗೌರವಪೂರ್ವಕ ನಮನಗಳು.

ಜಿಲ್ಲೆಗಳಲ್ಲಿ ನಮ್ಮ ಪ್ರಾಧಿಕಾರದ ಯೋಜನೆಗಳ ಅನುಷ್ಠಾನಾಧಿಕಾರಿಗಳಾದ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೂ ಪ್ರಾಧಿಕಾರದ ಪರವಾಗಿ ಆಭಾರಿಯಾಗಿದ್ದೇನೆ.

ಕರ್ನಾಟಕ ರಾಜ್ಯದ 19 ಜಿಲ್ಲೆಗಳ 63 ತಾಲ್ಲೂಕುಗಳಿಗೆ ವ್ಯಾಪಿಸಿರುವ ಗಡಿ ಭಾಗದಲ್ಲಿನ ಹಾಗೂ ಕರ್ನಾಟಕದ ನೆರೆ ರಾಜ್ಯಗಳ ಕನ್ನಡ ಪರ ಸಂಘ ಸಂಸ್ಥೆಗಳು, ಕನ್ನಡ ಪರಚಿಂತಕರು ಹಾಗೂ ಮಾಧ್ಯಮದ ಸನ್ಮಿತ್ರರು ನಮ್ಮ ಯೋಜನೆಗಳಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಅವರೆಲ್ಲರಿಗೂ ನನ್ನ ಗೌರವಪೂರ್ವಕವಾದ ಕೃತಜ್ಞತೆಗಳು.

"ಗಡಿ ನಾಡಿನಲ್ಲಿ ಕನ್ನಡ ಪ್ರಜ್ಞೆ ಅರಳಲಿ" ಹಾಗೂ "ಕನ್ನಡದ ಕಹಳೆ ಮೊಳಗಲಿ" ಎಂಬ ಆಶಯದೊಂದಿಗೆ ಗಡಿ ಭಾಗದ ಕನ್ನಡಿಗರ ಹಿತಾಸಕ್ತಿಯನ್ನು ಕಾಪಾಡುವಂತಹ ಹಾಗೂ ಗಡಿ ನಾಡಿನಲ್ಲಿ ಕನ್ನಡ ಮನಸ್ಸುಗಳನ್ನು ಕಟ್ಟುವಂತಹ ಕಾಯಕವನ್ನು ನಿಸ್ಪೃಹತೆಯಿಂದ ಪ್ರಾಧಿಕಾರವು ನಿರ್ವಹಿಸುತ್ತದೆ ಎಂಬ ಭರವಸೆಯನ್ನು ಪ್ರಾಧಿಕಾರದ ಪರವಾಗಿ ನಾನು ನೀಡಬಯಸುತ್ತೇನೆ. ಭಾರತ ಸ್ವಾತ್ಯಂತ್ರ ಅಮೃತೋತ್ಸವದ ನೆನಪಿನಲ್ಲಿ ನಮ್ಮ ಪ್ರಾಧಿಕಾರವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಕರ್ನಾಟಕವು ಹೊರತರುತ್ತಿರುವ ಈ ಮಾಹಿತಿ ಕೈಪಿಡಿಯು ನಮ್ಮ ಪ್ರಾಧಿಕಾರ ನಡೆದು ಬಂದ ಹಾದಿಯನ್ನು ಹಾಗೂ ಪ್ರಾಧಿಕಾರದ ಮುಂದಿನ ಯೋಜನೆಗಳನ್ನು ಸೂಕ್ಷ್ಮವಾಗಿ ಪರಿಚಯಿಸುವ ದಿಸೆಯಲ್ಲಿ ಉತ್ತಮ ಮಾಹಿತಿ ಕೈಪಿಡಿಯಾಗುವುದೆಂದು ನಾನು ಆಶಿಸುತ್ತೇನೆ.

"ಸಿರಿಗನ್ನಡಂ ಗೆಲ್ಗೆ" "ಸಿರಿಗನ್ನಡಂ ಬಾಳ್ಗೆ"

(ಡಾ. ಸಿ. ಸೋಮಶೇಖರ)

## ಪ್ರಾಧಿಕಾರದ ರಚನೆ:

2000ನೇ ಇಸವಿಯಲ್ಲಿ ಕನ್ನಡದ ಹಿರಿಯ ಹೋರಾಟಗಾರರಾದ ಸನ್ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರ ಅಧ್ಯಕ್ಷತೆಯ ಏಕಸದಸ್ಯ ಆಯೋಗದ ಮಧ್ಯಂತರ ವರದಿ ಹಾಗೂ ಪ್ರಖ್ಯಾತ ಸಾಹಿತಿಗಳಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸನ್ಮಾನ್ಯ ಅಧ್ಯಕ್ಷರಾಗಿದ್ದ ಡಾ. ಬರಗೂರು ರಾಮಚಂದ್ರಪ್ಪನವರು ಮಂಡಿಸಿದ ಗಡಿ ಅಧ್ಯಯನ ವರದಿಯ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಅಧಿನಿಯಮ 2010ರಂತೆ ಅಸ್ತಿತ್ವಕ್ಕೆ ಬಂದಿರುತ್ತದೆ.

ಗಡಿನಾಡು' ಎನ್ನುವುದು ಒಂದು ವಿಶಿಷ್ಟ ಪ್ರದೇಶ. ಕರ್ನಾಟಕ ರಾಜ್ಯದ 19 ಜಿಲ್ಲೆಯ 63 ತಾಲ್ಲೂಕುಗಳ ಭೌಗೋಳಿಕ ಪ್ರದೇಶಗಳನ್ನು ಗಡಿ ನಾಡೆಂದು ಹಾಗೂ ಆರು ನೆರೆ ರಾಜ್ಯಗಳಲ್ಲಿನ ಗಡಿಯಲ್ಲಿನ ಕನ್ನಡ ಪರಿಸರದ ಭಾಗಗಳನ್ನು ಸೇರಿಸಿಕೊಂಡು ಆ ಪ್ರದೇಶಗಳನ್ನು ಸಹಾ ಗಡಿ ಭಾಗ ಎಂದು ಗುರುತಿಸಿ ಆ ಪ್ರದೇಶಗಳನ್ನು ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೊಳಿಸುವುದು ಪ್ರಾಧಿಕಾರದ ಮೂಲ ಆಶಯವಾಗಿರುತ್ತದೆ. ಈ ಗಡಿ ಭಾಗದಲ್ಲಿ ಇರುವ ಸರ್ಕಾರಿ ಸಂಸ್ಥೆಗಳಲ್ಲದೆ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಕನ್ನಡಪರ ಸಂಸ್ಥೆಗಳು ಕ್ರಿಯಾಶೀಲವಾಗಿ ನಿರ್ವಹಿಸುತ್ತಿರುವ ಶಾಲೆಗಳಿಗೆ ಅಗತ್ಯವಾದ ಶಾಲಾ ಕೊಠಡಿಗಳನ್ನು, ಗ್ರಂಥಾಲಯಗಳನ್ನು, ರಸ್ತೆ ಸಂಪರ್ಕವನ್ನು, ಶುದ್ಧ ಕುಡಿಯುವ ನೀರಿನ ಘಟಕವನ್ನು, ಪೀಠೋಪಕರಣಗಳನ್ನು, ಸಾಂಸ್ಕೃತಿಕ ಭವನಗಳನ್ನು ಹಾಗೂ ಇನ್ನಿತರ ಪೂರಕವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಈ ಭಾಗದಲ್ಲಿ ಕನ್ನಡಪರ ಸಾಂಸ್ಕೃತಿಕ ವಾತಾವರಣ ಉಂಟು ಮಾಡುವುದು ಕನ್ನಡಪರ ಸಾಹಿತ್ಯ, ಸಂಸ್ಕೃತಿ, ಕಲೆಗಳ ಉತ್ಸವಗಳನ್ನು ಏರ್ಪಡಿಸುವುದು ಪ್ರಾಧಿಕಾರದ ಮೂಲ ಆಶಯವಾಗಿರುತ್ತದೆ. ಈ ಕೆಳಕಂಡ ಪದಾಧಿಕಾರಿಗಳು ಗಡಿ ಪ್ರಾಧಿಕಾರದ ಅಧಿನಿಯಮದನ್ವಯ ಅಧ್ಯಕ್ಷ ಹಾಗೂ ಸದಸ್ಯರುಗಳಾಗಿರುತ್ತಾರೆ.

- **ಅಧ್ಯಕ್ಷರು (ಸರ್ಕಾರದಿಂದ ಅಧಿಕಾರೇತರ ನಾಮನಿರ್ದೇಶನ)**
- **7 ಜನ ಸದಸ್ಯರು**
- **8 ಜನ ಅಧಿಕಾರಿ ಸದಸ್ಯರು:–**

**1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು–ಕಂದಾಯ ಇಲಾಖೆ**
**2. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**3. ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ**
**4. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಮತ್ತು ವಾರ್ತಾ ಇಲಾಖೆ**
**5. ಅಧ್ಯಕ್ಷರು–ಕನ್ನಡ ಸಾಹಿತ್ಯ ಪರಿಷತ್ತು**
**6. ಅಧ್ಯಕ್ಷರು–ಸಾಹಿತ್ಯ ಅಕಾಡೆಮಿ**
**7. ಅಧ್ಯಕ್ಷರು–ಕನ್ನಡ ಅಭಿವೃದ್ಧಿ ಪ್ರಾಧಿಕಾರ**
**8. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಗಡಿ ಪ್ರಾಧಿಕಾರದ ಕಾರ್ಯದರ್ಶಿ–ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

## ಪ್ರಾಧಿಕಾರದ ಪ್ರಕಾರ್ಯಗಳು

- ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದು. ಇದಲ್ಲದೆ, ನೆರೆಹೊರೆಯ ರಾಜ್ಯದ ಗಡಿ ಭಾಗಗಳಲ್ಲಿ ಕನ್ನಡ ಮಾತನಾಡುವ ಜನರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಯನ್ನು ಸುಧಾರಿಸುವುದು.
- ರಾಜ್ಯದ ಹೊರಭಾಗದ ಗಡಿಯಲ್ಲಿ ಅವಶ್ಯವಿರುವಷ್ಟು ಕನ್ನಡ ಶಾಲೆಗಳನ್ನು ತೆರೆಯಲು ಸಹಾಯ ಒದಗಿಸುವುದು. ನೆರೆರಾಜ್ಯದವರು ಕನ್ನಡ ಶಾಲೆಗಳನ್ನು ಮುಚ್ಚಿರುವಂತಹ ಗ್ರಾಮಗಳಲ್ಲಿ ಕನ್ನಡಿಗರಿಗೆ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವುದು. ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡುವುದು.
- ಗಡಿ ಪ್ರದೇಶದಲ್ಲಿ ಕನ್ನಡದಲ್ಲಿ ಶಿಕ್ಷಣ ನೀಡುವುದಕ್ಕೆ ಅವಶ್ಯವಾದ ಶಿಕ್ಷಕರನ್ನು ನೇಮಕ ಮಾಡಲು ಸಹಾಯ ಮಾಡುವುದು. ಕನ್ನಡದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳನ್ನು ಕಾಲ ಕಾಲಕ್ಕೆ ಒದಗಿಸುವುದು.
- ಕನ್ನಡಿಗರಿಗೆ ಕನ್ನಡ ಭಾಷೆಯಲ್ಲಿ ದೈನಂದಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು ಕನ್ನಡ ವೃತ್ತ ಪತ್ರಿಕೆಗಳು, ವಾರ ಪತ್ರಿಕೆಗಳು ಆ ಭಾಗಗಳಲ್ಲಿ ದೊರಕುವಂತೆ ಮಾಡಲು ಗ್ರಂಥಾಲಯಗಳನ್ನು ಗಡಿ ಭಾಗಗಳಲ್ಲಿ ಪ್ರಾರಂಭ ಮಾಡುವುದು.
- ಕನ್ನಡ ಭಾಷೆ ಬೆಳವಣಿಗೆ ದೃಷ್ಟಿಯಿಂದ ನೋಂದಣಿಯಾದ ಕನ್ನಡಪರ ಸಂಘಟನೆಗಳಿಗೆ–ವಾರ್ಷಿಕವಾಗಿ ಭಾಷಾ ಚಟುವಟಿಕೆಗಳನ್ನು ನಡೆಸಲು ಅನುದಾನ ನೀಡುವುದು.
- ಗಡಿ ಪ್ರದೇಶದಲ್ಲಿ ಕನ್ನಡ ಪರ ಸಂಘಟಣೆಗಳು ಕನ್ನಡಪರವಾಗಿ ಕ್ರಿಯಾಶೀಲರಾಗಿ ಕೆಲಸ ಮಾಡುವಂತೆ ಮಾಡುವ ಉದ್ದೇಶದಿಂದ ಹೆಚ್ಚು ಹೆಚ್ಚು ಸಂಘಗಳನ್ನು ಗಡಿ ಭಾಗದಲ್ಲಿ ಕಟ್ಟಲು ಮತ್ತು ಈ ಸಂಘಟನೆಗಳು ಭಾಷಾ ಉಪನ್ಯಾಸ ಮಾಲಿಕೆಗಳನ್ನು ಸಂಘಟಿಸಲು ಸಹಾಯ ಮಾಡುವ ದೃಷ್ಟಿಯಿಂದ ಪ್ರಚಾರ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದು.
- ಸಾಂಸ್ಕೃತಿಕ ಚಟುವಟಿಕೆಗಳನ್ನು ಗಡಿ ಪ್ರದೇಶಗಳಲ್ಲಿ ಹಮ್ಮಿಕೊಂಡು ಗಡಿ ಕನ್ನಡಿಗರ ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸುವುದು.
- ಕನ್ನಡ ಸಾಹಿತ್ಯ, ಚಲನಚಿತ್ರ, ನಾಟಕ, ಜಾನಪದ ನೃತ್ಯ, ಯಕ್ಷಗಾನ, ಲಾವಣಿ, ಬಯಲಾಟ, ತೊಗಲುಗೊಂಬೆ ಆಟ, ಹರಿಕಥೆ ಸಂಗೀತ ಇತ್ಯಾದಿ ಕಲೆಗಳು ನಶಿಸಿಹೋಗದಂತೆ ಪ್ರದರ್ಶಕ್ಕೆ ಸೂಕ್ತವಾದ ವೇದಿಕೆಗಳನ್ನು ಕಲ್ಪಿಸುವುದು. ರಾಜ್ಯದ ಗಡಿ ಭಾಗದ ತಾಲ್ಲೂಕುಗಳು ಹಾಗೂ ಗ್ರಾಮಗಳ ಕನ್ನಡಿಗರು ಹೊರ ರಾಜ್ಯಗಳ ಕನ್ನಡಿಗರಿಗೆ ಈ ಕಲೆಗಳನ್ನು ಪ್ರದರ್ಶಿಸಲು ಸಾಂಸ್ಕೃತಿಕ ಭವನಗಳನ್ನು ಕಟ್ಟುವುದು.
- ಗಡಿ ಪ್ರದೇಶ ಹಾಗೂ ಹೊರನಾಡು ಉತ್ಸವಗಳನ್ನು ಹಮ್ಮಿಕೊಳ್ಳುವುದು. ಕನ್ನಡ ಭವನಗಳನ್ನು ಕಟ್ಟುವುದು, ಗಡಿ ಪ್ರದೇಶದ ಜನರ ಪರಿಸ್ಥಿತಿಯನ್ನು ಸುಧಾರಿಸಲು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು, ಅವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದು.
- ಗಡಿ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನತೆಯ ಜೀವನ ಭದ್ರತೆಯ ದೃಷ್ಟಿಯಿಂದ ನೀಡಬಹುದಾದ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಿ ಸಂಬಂಧಿತ ಇಲಾಖೆಗಳ ಮೂಲಕ ನೆರವು ನೀಡುವುದು.
- ಗಡಿ ಪ್ರದೇಶಗಳಲ್ಲಿ ಕರಕುಶಲ ಕೈಗಾರಿಕೆ ಹಾಗೂ ಇತರೆ ಉದ್ಯಮಗಳಿಗೆ ಪ್ರೋತ್ಸಾಹದಾಯಕ ಕ್ರಮ ಕೈಗೊಳ್ಳುವುದು.
- ಗಡಿ ಪ್ರದೇಶದ ಹಳ್ಳಿಗಳಿಗೆ ಕುಡಿಯುವ ನೀರು, ಆರೋಗ್ಯ, ವ್ಯವಸಾಯ, ನೀರಾವರಿ, ರಸ್ತೆ ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಅಗತ್ಯವಾದ ಕೆಲಸಗಳನ್ನು ಆಯಾಯ ಇಲಾಖೆಗಳು ಒದಗಿಸುವುದನ್ನು ಮೇಲ್ವಿಚಾರಣೆ ಮಾಡುವುದು.

## ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸಿದ ಅಧ್ಯಕ್ಷರುಗಳ ವಿವರ

| ಕ್ರ. ಸಂ. | ಶ್ರೀಯುತರು | ಕರ್ತವ್ಯದ ಅವಧಿ |
|---|---|---|
| 1 | ಶ್ರೀ ಚಂದ್ರಕಾಂತ ಬೆಲ್ಲದ | ದಿನಾಂಕ : 25–02–2009 ರಿಂದ 24–02–2012 |
| 2 | ಶ್ರೀ ವಿರೂಪಾಕ್ಷಗೌಡ. ಜಿ | ದಿನಾಂಕ : 01–2–2013 ರಿಂದ 16–04–2013 |
| 3 | ಶ್ರೀ ಸುಭಾಸ. ಛಾಯಾಗೋಳ | ದಿನಾಂಕ : 24–11–2014 ರಿಂದ 27–05–2016 |
| 4 | ಶ್ರೀ ಬಾಬುರಾವ್ ಚಿಂಚನಸೂರು | ದಿನಾಂಕ : 02–11–2016 ರಿಂದ 06–04–2018 |
| 5 | ಡಾ. ಜಯಮಾಲ,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು | ದಿನಾಂಕ : 20–9–201 ರಿಂದ 10–1–2019 |
| 6 | ಶ್ರೀ ಡಿ.ಕೆ.ಶಿವಕುಮಾರ್<br>ಜಲಸಂಪನ್ಮೂಲ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು | ದಿನಾಂಕ : 11–01–2019 ರಿಂದ 23–7–2019 |
| 7 | ಶ್ರೀ ಆರ್. ಆರ್. ಜನ್ನು, ಭಾ.ಆ.ಸೇ | ದಿನಾಂಕ : 30–7–2019 ರಿಂದ 30–5–2020 |
| 8 | ಶ್ರೀಮತಿ ಎನ್ ಮಂಜುಳಾ, ಭಾ.ಆ.ಸೇ<br>ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ(ಪ್ರ) | ದಿನಾಂಕ : 30–5–2020 ರಿಂದ 22–6–2020 |
| 9 | ಶ್ರೀಮತಿ ವಿ. ರಶ್ಮಿ ಮಹೇಶ್, ಭಾ.ಆ.ಸೇ<br>ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ(ಪ್ರ) | ದಿನಾಂಕ : 22–6–2020 ರಿಂದ 02.12.2020 |
| 10 | ಡಾ. ಸಿ. ಸೋಮಶೇಖರ, ಭಾ.ಆ.ಸೇ(ನಿ) | ದಿನಾಂಕ : 02–12–2020 ರಿಂದ |




**ಪ್ರಕಾಶ್ ಮತ್ತೀಹಳ್ಳಿ**
ಕಾರ್ಯದರ್ಶಿಗಳು
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಗಡಿ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪಟ್ಟಿ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಕ್ರ.ಸಂ. | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು |
|---|---|---|---|---|---|
| 1 | ಬೆಂಗಳೂರು ನಗರ | 1) ಆನೇಕಲ್ | 11 | ಮೈಸೂರು | 27) ಹೆಗ್ಗಡದೇವನಕೋಟೆ |
| 2 | ಬೆಂಗಳೂರು ಗ್ರಾಮಾಂತರ | 2) ಹೊಸಕೋಟೆ | 12 | ಬಿಜಾಪುರ | 28) ಬಿಜಾಪುರ<br>29) ಇಂಡಿ |
| 3 | ರಾಮನಗರ | 3) ಕನಕಪುರ | 13 | ಬಳ್ಳಾರಿ | 30) ಬಳ್ಳಾರಿ<br>31) ಸಂಡೂರು<br>32) ಸಿರಗುಪ್ಪ |
| 4 | ಚಿತ್ರದುರ್ಗ | 4) ಚಳ್ಳಕೆರೆ<br>5) ಹಿರಿಯೂರು<br>6) ಮೊಳಕಾಲ್ಮೂರು | 14 | ಕಲಬುರ್ಗಿ | 33) ಅಫಜಲಪುರ<br>34) ಆಳಂದ<br>35) ಚಿಂಚೋಳಿ<br>36) ಸೇಡಂ |
| 5 | ಚಿಕ್ಕಬಳ್ಳಾಪುರ | 7) ಬಾಗೇಪಲ್ಲಿ<br>8) ಚಿಂತಾಮಣಿ<br>9) ಗೌರಿಬಿದನೂರು<br>10) ಗುಡಿಬಂಡೆ | 15 | ಯಾದಗಿರಿ | 37) ಶಹಪುರ<br>38) ಯಾದಗಿರಿ |
| 6 | ಕೋಲಾರ | 11) ಮಾಲೂರು<br>12) ಮುಳಬಾಗಿಲು<br>13) ಶ್ರೀನಿವಾಸಪುರ<br>14) ಬಂಗಾರುಪೇಟೆ | 16 | ರಾಯಚೂರು | 39) ಮಾನ್ವಿ<br>40) ರಾಯಚೂರು |
| 7 | ತುಮಕೂರು | 15) ಮಧುಗಿರಿ<br>16) ಪಾವಗಡ<br>17) ಸಿರಾ | 17 | ಬೆಳಗಾವಿ | 41) ಬೆಳಗಾವಿ<br>42) ಅಥಣಿ<br>43) ಹುಕ್ಕೇರಿ<br>44) ಚಿಕ್ಕೋಡಿ<br>45) ಖಾನಾಪುರ |
| 8 | ದಕ್ಷಿಣ ಕನ್ನಡ | 18) ಬಂಟ್ವಾಳ<br>19) ಮಂಗಳೂರು<br>20) ಪುತ್ತೂರು<br>21) ಸುಳ್ಯ | 18 | ಉತ್ತರ ಕನ್ನಡ | 46) ಕಾರವಾರ<br>47) ಜೋಯಿಡಾ |
| 9 | ಕೊಡಗು | 22) ಮಡಿಕೇರಿ<br>23) ವಿರಾಜಪೇಟೆ | 19 | ಬೀದರ್ | 48) ಬಸವಕಲ್ಯಾಣ<br>49) ಔರಾದ್<br>50) ಭಾಲ್ಕಿ<br>51) ಬೀದರ್<br>52) ಹುಮ್ನಾಬಾದ್ |
| 10 | ಚಾಮರಾಜನಗರ | 24) ಚಾಮರಾಜನಗರ<br>25) ಗುಂಡ್ಲುಪೇಟೆ<br>26) ಕೊಳ್ಳೇಗಾಲ | | | |

| | | |
|---|---|---|
| ಹೊಸದಾಗಿ ಸೇರ್ಪಡೆಗೊಳ್ಳುವ ಹನ್ನೊಂದು ಗಡಿ ತಾಲ್ಲೂಕುಗಳು | ಬೆಳಗಾವಿ– | 1) ನಿಪ್ಪಾಣಿ |
| | ಚಾಮರಾಜನಗರ– | 2) ಹನೂರ |
| | ಬೀದರ– | 3) ಚಿಟಗುಪ್ಪ |
| | | 4) ಹಲಸೂರು |
| | | 5) ಕಮಲಾನಗರ |
| | ಯಾದಗಿರಿ– | 6) ವಡಗೇರಾ |
| | | 7) ಗುರುಮಿಠ್ಕಲ್ |
| | ವಿಜಯಪುರ– | 8) ತಿಕೋಟಾ |
| | | 9) ಚಡಚಣ |
| | ಮೈಸೂರು– | 10) ಸರಗೂರು |
| | ಕೋಲಾರ– | 11) ಕೆ.ಜಿ.ಎಫ್ |
| | ಒಟ್ಟು | 63 ತಾಲ್ಲೂಕುಗಳು |
| ಒಟ್ಟು ಆರು ನೆರೆ ರಾಜ್ಯಗಳು ಕರ್ನಾಟಕ ರಾಜ್ಯದ ಗಡಿಗೆ ಹೊಂದಿಕೊಂಡಿರುತ್ತವೆ. | 1) ಆಂಧ್ರಪ್ರದೇಶ<br>2) ತೆಲಂಗಾಣ<br>3) ಮಹಾರಾಷ್ಟ್ರ<br>4) ಗೋವಾ<br>5) ಕೇರಳ<br>6) ತಮಿಳುನಾಡು | |


ಕಿತ್ತೂರು ರಾಣಿ ಚನ್ನಮ್ಮ, ಬೆಳಗಾವಿ


ಕಮಲ ಬಸ್ತಿ, ಬೆಳಗಾವಿ

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2018–19ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಸಾಂಸ್ಕೃತಿಕ ಭವನ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 2 | 12.50 |
| | | **ಒಟ್ಟು** | **2** | **12.5** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೊಠಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬೆಳಗಾವಿ | ಅಥಣಿ | 2 | 37.50 |
| 2 | ತುಮಕೂರು | ಶಿರಾ | 1 | 15.00 |
| 3 | ಚಿತ್ರದುರ್ಗ | ಚಳ್ಳಕೆರೆ | 1 | 5.00 |
| | | **ಒಟ್ಟು** | **4** | **57.5** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಹೈಮಾಸ್ಟ್ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ರಾಯಚೂರು | ಮಾನ್ವಿ | 1 | 30.00 |
| 2 | ಬೆಳಗಾವಿ | ಬೆಳಗಾವಿ | 1 | 30.00 |
| 3 | ಚಿತ್ರದುರ್ಗ | ಚಳ್ಳಕೆರೆ | 1 | 25.00 |
| | | **ಒಟ್ಟು** | **3** | **85.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೌಂಪೌಂಡ್ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬೆಳಗಾವಿ | ಹುಕ್ಕೇರಿ | 1 | 20.00 |
| 2 | ತುಮಕೂರು | ಮಧುಗಿರಿ | 1 | 30.00 |
| 3 | ಯಾದಗಿರಿ | ಶಹಾಪೂರ | 1 | 15.00 |
| | | **ಒಟ್ಟು** | **3** | **65.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ರಸ್ತೆ ನಿರ್ಮಾಣ/ಸುಧಾರಣೆ/ಚರಂಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ರಾಯಚೂರು | ರಾಯಚೂರು | 2 | 114.90 |
| 2 | ತುಮಕೂರು | ಶಿರಾ | 1 | 35.00 |
| 3 | ರಾಮನಗರ | ಕನಕಪುರ | 2 | 225.00 |
| 4 | ಬೆಂಗಳೂರು ನಗರ | ಆನೇಕಲ್ | 1 | 175.00 |
| | | **ಒಟ್ಟು** | **6** | **549.90** |

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019–20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ರಸ್ತೆ ನಿರ್ಮಾಣ/ಸುಧಾರಣೆ/ಚರಂಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ರಾಯಚೂರು | ರಾಯಚೂರು ತಾ॥ | 5 | 87.80 |
| 2 | ವಿಜಯಪುರ | ವಿಜಯಪುರ ತಾ | 1 | 47.50 |
| 3 | ಯಾದಗಿರಿ | ಯಾದಗಿರಿ ತಾ॥ | 6 | 17.03 |
| 4 | ಬೆಳಗಾವಿ | ಬೆಳಗಾವಿ ತಾ॥ | 2 | 12.05 |
| 5 | ಚಿತ್ರದುರ್ಗ | ಚಳ್ಳಕೆರೆ | 3 | 84.03 |
| 6 | ಬೆಳಗಾವಿ | ಚಿಕ್ಕೋಡಿ | 1 | 18.89 |
| 7 | ಕಲಬುರ್ಗಿ | ಸೇಡಂ | 1 | 9.99 |
| 8 | ಚಿತ್ರದುರ್ಗ | ಮೊಳಕಾಲ್ಮೂರು ತಾ॥ | 4 | 78.23 |
| 9 | ತುಮಕೂರು | ಶಿರಾ | 2 | 26.66 |
| 10 | ದಕ್ಷಿಣ ಕನ್ನಡ | ಪುತ್ತೂರು | 1 | 5.00 |
| 11 | ಬಳ್ಳಾರಿ | ಬಳ್ಳಾರಿ | 1 | 7.88 |
| 12 | ಬಳ್ಳಾರಿ | ಸಿರಗುಪ್ಪ | 1 | 1.22 |
| 13 | ಚಿಕ್ಕಬಳ್ಳಾಪುರ | ಗೌರಿಬಿದನೂರು | 1 | 12.50 |
| 14 | ಬೀದರ | ಬೀದರ | 2 | 62.00 |
| 15 | ರಾಮನಗರ | ಕನಕಪುರ | 2 | 206.00 |
| | | **ಒಟ್ಟು** | **33** | **676.78** |


ತಲಕಾವೇರಿ (ಮಡಿಕೇರಿ)

ಶರಣ ಬಸವೇಶ್ವರ ದೇವಾಲಯ, ಕಲಬುರ್ಗಿ



# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019–20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಸಾಂಸ್ಕೃತಿಕ ಭವನ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ವಿಜಯಪುರ | ವಿಜಯಪುರ | 4 | 55.00 |
| | | ಇಂಡಿ | 6 | 110.00 |
| 2 | ಯಾದಗಿರಿ | ಯಾದಗಿರಿ | 1 | 5.00 |
| | | ಶಹಾಪೂರ | 1 | 4.00 |
| 3 | ಚಿತ್ರದುರ್ಗ | ಚಳ್ಳಕೆರೆ | 3 | 11.00 |
| 4 | ತುಮಕೂರು | ಪಾವಗಡ | 2 | 22.00 |
| | | ಶಿರಾ | 1 | 20.00 |
| 5 | ಬೆಳಗಾವಿ | ಚಿಕ್ಕೋಡಿ | 2 | 20.00 |
| 6 | ಬಳ್ಳಾರಿ | ಬಳ್ಳಾರಿ | 1 | 50.00 |
| 7 | ಬೀದರ | ಬೀದರ | 1 | 25.00 |
| | | ಔರಾದ | 1 | 7.50 |
| 8 | ರಾಮನಗರ | ಕನಕಪುರ | 2 | 515.00 |
| | | **ಒಟ್ಟು** | **25** | **844.50** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಹೈಮಾಸ್ಟ್ ದೀಪ ಅಳವಡಿಕೆ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ರಾಯಚೂರು | ರಾಯಚೂರು | 1 | 25.00 |
| 2 | ಚಿತ್ರದುರ್ಗ | ಚಳ್ಳಕೆರೆ | 1 | 75.00 |
| | | **ಒಟ್ಟು** | **2** | **100.00** |


ಬೇಕಲ್ ಕೋಟೆ, ಕಾಸರಗೋಡು

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019–20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೊಠಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಯಾದಗಿರಿ | ಯಾದಗಿರಿ | 3 | 17.00 |
| | | ಶಹಾಪೂರ | 1 | 5.00 |
| 2 | ವಿಜಯಪುರ | ಇಂಡಿ | 6 | 98.50 |
| | | ವಿಜಯಪುರ | 5 | 72.00 |
| 3 | ಬೆಳಗಾವಿ | ಅಥಣಿ | 2 | 70.00 |
| | | ಬೆಳಗಾವಿ | 1 | 5.50 |
| 4 | ಚಿತ್ರದುರ್ಗ | ಮೊಳಕಾಲ್ಮೂರು | 3 | 121.80 |
| | | ಚಳ್ಳಕೆರೆ | 3 | 52.50 |
| 5 | ಕಲಬುರ್ಗಿ | ಅಫಜಲಪೂರ | 2 | 15.00 |
| | | ಚಿಂಚೋಳಿ | 1 | 1.00 |
| | | ಆಳಂದ | 1 | 5.00 |
| 6 | ತುಮಕೂರು | ಪಾವಗಡ | 2 | 40.00 |
| | | ಶಿರಾ | 2 | 11.00 |
| 7 | ದಕ್ಷಿಣ ಕನ್ನಡ | ಪುತ್ತೂರು | 2 | 22.50 |
| | | ಸುಳ್ಯ | 2 | 27.50 |
| | | ಬಂಟ್ವಾಳ | 2 | 55.50 |
| 8 | ಬಳ್ಳಾರಿ | ಸಿರಗುಪ್ಪ | 2 | 10.00 |
| 9 | ಬೀದರ | ಭಾಲ್ಕಿ | 1 | 10.00 |
| 10 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 1 | 18.00 |
| | | **ಒಟ್ಟು** | **42** | **657.8** |


## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019–20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೊಠಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಮೊಳಕಾಲ್ಮೂರು | 1 | 5.00 |
| 2 | ಕಲಬುರ್ಗಿ | ಆಳಂದ | 2 | 9.00 |
| | | ಅಫಜಲಪೂರ | 2 | 25.00 |
| 3 | ತುಮಕೂರು | ಪಾವಗಡ | 1 | 10.00 |
| | | ಶಿರಾ | 2 | 65.00 |
| | | **ಒಟ್ಟು** | **8** | **114.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 1 | 8.12 |
| 2 | ತುಮಕೂರು | ಪಾವಗಡ | 1 | 3.00 |
| 3 | ಬಳ್ಳಾರಿ | ಬಳ್ಳಾರಿ | 1 | 50.00 |
| 4 | ಚಿಕ್ಕಬಳ್ಳಾಪುರ | ಗುಡಿಬಂಡೆ | 1 | 10.76 |
| | | **ಒಟ್ಟು** | **4** | **71.88** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಕ್ರೀಡಾ ಕೊಠಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ವಿಜಯಪುರ | ಇಂಡಿ | 1 | 25.00 |
| | | **ಒಟ್ಟು** | **1** | **25.00** |


ಸದಾಶಿವಗಡ್ ಕೋಟೆ, ಕಾರವಾರ


ಮಲೆ ಮಹದೇಶ್ವರ ದೇವಾಲಯ, ಚಾಮರಾಜನಗರ ಜಿಲ್ಲೆ

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019–20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಗಣಕಯಂತ್ರ ಕೊಠಡಿ ನಿರ್ಮಾಣ/ಖರೀದಿ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಯಾದಗಿರಿ | ಯಾದಗಿರಿ | 2 | 15.00 |
| 2 | ಬೀದರ | ಭಾಲ್ಕಿ | 1 | 10.00 |
| | | **ಒಟ್ಟು** | **3** | **25.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಸಮುದಾಯ ಭವನ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ವಿಜಯಪುರ | ಇಂಡಿ | 1 | 10.00 |
| | | **ಒಟ್ಟು** | **1** | **10.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಬಯಲುರಂಗ ಮಂದಿರ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ತುಮಕೂರು | ಮಧುಗಿರಿ | 1 | 1.00 |
| | | **ಒಟ್ಟು** | **1** | **1.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶೌಚಾಲಯ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ವಿಜಯಪುರ | ವಿಜಯಪುರ | 1 | 20.00 |
| 2 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 1 | 5.00 |
| | | **ಒಟ್ಟು** | **2** | **25.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಆಟದ ಮೈದಾನ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಕಲಬುರ್ಗಿ | ಆಳಂದ | 1 | 3.00 |
| 2 | ಬೆಳಗಾವಿ | ಹುಕ್ಕೇರಿ | 1 | 5.00 |
| | | **ಒಟ್ಟು** | **2** | **8.00** |

ಮುಳಬಾಗಿಲು, ಆಂಜನೇಯ ಸ್ವಾಮಿ ದೇವಸ್ಥಾನ, ಕೋಲಾರ ಜಿಲ್ಲೆ



ಬಳ್ಳಾರಿ ಕೋಟೆ, ಬಳ್ಳಾರಿ ತಾಲ್ಲೂಕು



## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019-20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಸಾಂಸ್ಕೃತಿಕ ಕಾರ್ಯಕ್ರಮ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ರಾಯಚೂರು | ರಾಯಚೂರು | 4 | 12.00 |
| | | ಮಾನ್ವಿ | 1 | 3.00 |
| 2 | ಉತ್ತರ ಕನ್ನಡ | ಜೊಯಿಡಾ | 1 | 3.00 |
| 3 | ವಿಜಯಪುರ | ಇಂಡಿ | 7 | 21.00 |
| 4 | ಯಾದಗಿರಿ | ಯಾದಗಿರಿ | 9 | 27.00 |
| | | ಶಹಾಪೂರ | 7 | 21.00 |
| 5 | ಬೆಳಗಾವಿ | ಬೆಳಗಾವಿ | 3 | 9.00 |
| 6 | ಚಿತ್ರದುರ್ಗ | ಚಳ್ಳಕೆರೆ | 10 | 30.00 |
| | | ಹಿರಿಯೂರು | 9 | 27.00 |
| | | ಮೊಳಕಾಲ್ಮೂರು | 1 | 3.00 |
| 7 | ಕಲಬುರ್ಗಿ | ಅಫಜಲಪೂರ | 2 | 6.00 |
| | | ಆಳಂದ | 15 | 45.00 |
| 8 | ತುಮಕೂರು | ಮಧುಗಿರಿ | 4 | 12.00 |
| | | ಶಿರಾ | 2 | 6.00 |
| | | ಪಾವಗಡ | 15 | 45.00 |
| 9 | ದಕ್ಷಿಣ ಕನ್ನಡ | ಮಂಗಳೂರು | 2 | 6.00 |
| 10 | ಬಳ್ಳಾರಿ | ಬಳ್ಳಾರಿ | 1 | 3.00 |
| 11 | ಚಿಕ್ಕಬಳ್ಳಾಪುರ | ಚಿಂತಾಮಣಿ | 1 | 3.00 |
| | | ಗೌರಿಬಿದನೂರು | 4 | 12.00 |
| 12 | ಬೀದರ | ಬೀದರ | 9 | 27.00 |
| | | ಭಾಲ್ಕಿ | 2 | 6.00 |
| | | ಹುಮ್ನಾಬಾದ್ | 2 | 6.00 |
| 13 | ಕೋಲಾರ | ಬಂಗಾರುಪೇಟೆ | 7 | 21.00 |
| | | ಮಾಲೂರು | 2 | 6.00 |
| | | ಶ್ರೀನಿವಾಸಪುರ | 1 | 3.00 |
| 14 | ಕೊಡಗು | ಮಡಿಕೇರಿ | 2 | 6.00 |
| | | **ಒಟ್ಟು** | **123** | **369.00** |

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2019-20ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ


| ಕ್ರಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಉದ್ದೇಶ | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | ದಕ್ಷಿಣ ಕನ್ನಡ | ಮಂಗಳೂರು | ತುಳು ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ ಮುಂದುವರೆದ ಕಾಮಗಾರಿ | 1 | 360.00 |
| 2 | ದಕ್ಷಿಣ ಕನ್ನಡ | ಮಂಗಳೂರು | ನೂತನವಾಗಿ ನಿರ್ಮಿಸಲಿರುವ ಬ್ಯಾರಿ ಸಾಹಿತ್ಯ ಅಕಾಡೆಮಿ ಕಟ್ಟಡ ಕಾಮಗಾರಿ | 1 | 300.00 |
| 3 | ದಕ್ಷಿಣ ಕನ್ನಡ | ಮಂಗಳೂರು | ಕೊಂಕಣಿ ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ | 1 | 300.00 |
| 4 | ದಕ್ಷಿಣ ಕನ್ನಡ | ಮಂಗಳೂರು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಿರ್ಮಿಸುತ್ತಿರುವ ರಂಗಮಂದಿರದ ಮುಂದುವರೆದ ಕಾಮಗಾರಿಗಾಗಿ | 1 | 500.00 |
| 5 | ಕೊಡಗು | ಮಡಿಕೇರಿ | ಸಾಂಸ್ಕೃತಿಕ ಸಮುಚ್ಛಯ ಭವನದ ಮುಂದುವರೆದ ಕಾಮಗಾರಿ | 1 | 500.00 |
| 6 | ವಿಜಯಪುರ | ವಿಜಯಪುರ | ಕಂದಗಲ್ ಹನುಮಂತರಾಯ್ ರಂಗಮಂದಿರದ ಮುಂದುವರೆದ ಕಾಮಗಾರಿಗಾಗಿ | 1 | 75.00 |
| 7 | ಬೀದರ | ಬೀದರ | ಕನ್ನಡ ಭವನ ನಿರ್ಮಾಣ ಕಾಮಗಾರಿ | 1 | 100.00 |
| 8 | ಯಾದಗಿರಿ | ಯಾದಗಿರಿ | ಗಾಂಧಿ ಭವನ ನಿರ್ಮಾಣ ಮಾಡುವ ಸಂಬಂಧ ನಿವೇಶನ ಖರೀದಿಗಾಗಿ ಅನುದಾನ. | 1 | 200.00 |
| 9 | ಬೆಳಗಾವಿ | ಬೆಳಗಾವಿ | ಸಾಹಿತ್ಯ ಭವನ ಕಟ್ಟಡದ ನಿರ್ಮಾಣದ ಉಳಿದ ಕಾಮಗಾರಿಗೆ | 1 | 327.00 |
| | | | **ಒಟ್ಟು** | **9** | **2662.00** |

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2020-21ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ರಾಜ್ಯದ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಹೈಮಾಸ್ಟ್ ದೀಪ ಅಳವಡಿಕೆ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 1 | 22.67 |
| | | **ಒಟ್ಟು** | **1** | **22.67** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೊಠಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 1 | 10.00 |
| 2 | ಬೆಳಗಾವಿ | ಅಥಣಿ | 2 | 10.00 |
| 3 | ಚಿಕ್ಕಬಳ್ಳಾಪುರ | ಗುಡಿಬಂಡೆ | 1 | 3.00 |
| 4 | ಕಲಬುರ್ಗಿ | ಆಳಂದ | 1 | 10.00 |
| 5 | ಯಾದಗಿರಿ | ಶಹಾಪೂರ | 1 | 15.00 |
| | | ಯಾದಗಿರಿ | 1 | 10.00 |
| | | ಪುತ್ತೂರು | 2 | 52.50 |
| | | ಸುಳ್ಯ | 2 | 72.50 |
| | | ಬಂಟ್ವಾಳ | 3 | 156.50 |
| 6 | ಕೋಲಾರ | ಶ್ರೀನಿವಾಸಪುರ | 1 | 5.00 |
| | | **ಒಟ್ಟು** | **15** | **1534.50** |


ಕಲ್ಲಿನ ರಥ, ಹಂಪಿ


ಚಿತ್ರದುರ್ಗ ಕೋಟೆ, ಚಿತ್ರದುರ್ಗ

# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2020-21ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ರಾಜ್ಯದ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ರಸ್ತೆ ನಿರ್ಮಾಣ/ಸುಧಾರಣೆ/ಚರಂಡಿ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 1 | 12.50 |
| 2 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 1 | 9.60 |
| 3 | ರಾಮನಗರ | ಕನಕಪುರ | 4 | 223.76 |
| 4 | ಯಾದಗಿರಿ | ಯಾದಗಿರಿ | 6 | 106.66 |
| 5 | ರಾಯಚೂರು | ರಾಯಚೂರು | 1 | 19.51 |
| 6 | ಬೀದರ | ಬೀದರ | 1 | 20.00 |
| 7 | ಬೆಂಗಳೂರು ನಗರ ಜಿಲ್ಲೆ | ಆನೇಕಲ್ | 1 | 137.41 |
| 8 | ದಕ್ಷಿಣ ಕನ್ನಡ | ಬಂಟ್ವಾಳ | 1 | 150.00 |
| | | **ಒಟ್ಟು** | **16** | **679.44** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಸಾಂಸ್ಕೃತಿಕ ಭವನ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಮೊಳಕಾಲ್ಮೂರು | 1 | 10.00 |
| 2 | ಬೆಳಗಾವಿ | ಅಥಣಿ | 1 | 15.00 |
| | | ಖಾನಾಪುರ | 1 | 15.00 |
| | | ಚಿಕ್ಕೋಡಿ | 1 | 27.50 |
| 3 | ಕಲಬುರ್ಗಿ | ಅಫಜಲಪೂರ | 1 | 5.00 |
| | | **ಒಟ್ಟು** | **5** | **72.50** |


ಮೇಕೆದಾಟು, ಕನಕಪುರ ತಾಲ್ಲೂಕು


ಗಡಿ ಭಾಗದ ಕಲೆ-ಯಕ್ಷಗಾನ

## ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ 2020-21ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ರಾಜ್ಯದ ತಾಲ್ಲೂಕುವಾರು ನೀಡಿರುವ ಅನುದಾನದ ವಿವರ

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಿಕ್ಷಕರ ಸಮುಚ್ಚಯ ಭವನ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬೆಳಗಾವಿ | ಖಾನಾಪುರ | 1 | 9.00 |
| | | **ಒಟ್ಟು** | **1** | **9.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶೌಚಾಲಯ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಬೆಳಗಾವಿ | ಚಿಕ್ಕೋಡಿ | 1 | 30.00 |
| | | **ಒಟ್ಟು** | **1** | **30.00** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೌಂಪೌಂಡ್ ನಿರ್ಮಾಣ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಯಾದಗಿರಿ | ಯಾದಗಿರಿ | 1 | 4.95 |
| | | **ಒಟ್ಟು** | **1** | **4.95** |

| ಕ್ರ.ಸಂ | ಗಡಿ ಜಿಲ್ಲೆಯ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಶಾಲಾ ಕೊಠಡಿ/ಸಾಂಸ್ಕೃತಿಕ ಭವನ/ಶಾಲಾ ಕೌಂಪೌಂಡ್/ಸಮುದಾಯ ಭವನ ಇತ್ಯಾದಿ ವಿವಿಧ ಯೋಜನೆಗಳಿಗೆ | |
|---|---|---|---|---|
| | | | ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
| 1 | ಚಿತ್ರದುರ್ಗ | ಚಳ್ಳಕೆರೆ | 1 | 40.87 |
| 2 | ಚಾಮರಾಜನಗರ ಜಿಲ್ಲೆ | ಚಾಮರಾಜನಗರ | 1 | 32.05 |
| | | ಗುಂಡ್ಲುಪೇಟೆ | 1 | 43.32 |
| 3 | ಕಲಬುರ್ಗಿ | ಅಫಜಲಪೂರ | 1 | 35.00 |
| | | **ಒಟ್ಟು** | 4 | 151.24 |



ಹೊಗೇನಕಲ್ ಜಲಪಾತ, ಚಾಮರಾಜನಗರ ಜಿಲ್ಲೆ

## ಹೊರರಾಜ್ಯದ ಗಡಿ ಕನ್ನಡ ಪ್ರದೇಶಗಳಲ್ಲಿ 2019-20ನೇ ಹಾಗೂ 2020-21ನೇ ಸಾಲಿನಲ್ಲಿ ಗಡಿ ಪ್ರಾಧಿಕಾರದಿಂದ ವಿವಿಧ ಯೋಜನೆಗಳಿಗೆ ನೀಡಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಉದ್ದೇಶ | ಕೇರಳ ರಾಜ್ಯ | | ಮಹಾರಾಷ್ಟ್ರ | | | | ತೆಲಂಗಾಣ | | ಆಂಧ್ರಪ್ರದೇಶ | |
|---|---|---|---|---|---|---|---|---|---|---|---|
| | | ಕಾಸರಗೋಡು | | ಜತ್ತ | | ಅಕ್ಕಲಕೋಟ | | ಮೆಹಬೂಬ್ ನಗರ ಜಿಲ್ಲೆ | | ಅನಂತಪುರ ಜಿಲ್ಲೆ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಸಾಂಸ್ಕೃತಿಕ ಭವನ | 2 | 18.67 | 21 | 332.00 | 1 | 25.00 | | | | |
| 2 | ಶಾಲಾ ಕೊಠಡಿ | 9 | 85.00 | 13 | 187.00 | 1 | 1.00 | 1 | 6.00 | | |
| 3 | ವಸತಿ ಗೃಹ ನಿರ್ಮಾಣ | | | 5 | 115.00 | | | | | | |
| 4 | ಶಾಲಾ ಕಾಂಪೌಂಡ್ | 2 | 8.00 | 8 | 66.00 | | | | | | |
| 5 | ಗ್ರಂಥಾಲಯಕೊಠಡಿ | | | 5 | 85.00 | 1 | 20.00 | | | | |
| 6 | ಕ್ರೀಡಾಕೊಠಡಿ | | | 4 | 77.50 | | | | | | |
| 7 | ಗಣಕಯಂತ್ರಕೊಠಡಿ/ ನಿರ್ಮಾಣ | 1 | 7.00 | 1 | 1.00 | | | | | | |
| 8 | ಸಮುದಾಯ ಭವನ | | | 1 | 25.00 | | | | | | |
| 9 | ಬಯಲುರಂಗಮಂದಿರ | | | 1 | 25.00 | | | | | 1 | 5.00 |
| 10 | ಶೌಚಾಲಯ ನಿರ್ಮಾಣ | 1 | 7.00 | 1 | 5.00 | | | | | | |
| 11 | ಸಾಂಸ್ಕೃತಿಕಕಾರ್ಯಕ್ರಮ | | | 4 | 12 | | | | | | |
| | **ಒಟ್ಟು** | **15** | **125.67** | **64** | **930.50** | **3** | **46.00** | **1** | **6.00** | **1** | **5.00** |

ಅನಂತಪದ್ಮನಾಭ ದೇವಾಲಯ, ಅನಂತಪುರ, ಕಾಸರಗೋಡು






## ಘೋಷ್ವಾರೆ

(ಮೊತ್ತ ರೂ. ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ/ಕಾರ್ಯಕ್ರಮಗಳ ವಿವರ | 2018–19 | | 2019–20 | | 2020–21 | |
|---|---|---|---|---|---|---|---|
| | | ಸಂಖ್ಯೆ | ಬಿಡುಗಡೆ | ಸಂಖ್ಯೆ | ಬಿಡುಗಡೆ | ಸಂಖ್ಯೆ | ಬಿಡುಗಡೆ |
| 1 | ಗಡಿ ಭಾಗದಲ್ಲಿ ಶಾಲಾ ಕೊಠಡಿ ನಿರ್ಮಾಣ | 4 | 57.50 | 60 | 874.30 | 17 | 405.00 |
| 2 | ಬಯಲು ರಂಗಮಂದಿರ | – | – | 3 | 11.00 | | |
| 3 | ಗಣಕಯಂತ್ರ ಕೊಠಡಿಗಳ ನಿರ್ಮಾಣ/ಖರೀದಿ | – | – | 4 | 26.00 | 2 | 7.00 |
| 4 | ಸಾಂಸ್ಕೃತಿಕ ಕಾರ್ಯಕ್ರಮ | – | – | 127 | 381.00 | | |
| 5 | ಸಮುದಾಯ ಭವನ | – | – | 2 | 35.00 | | |
| 6 | ವಸತಿ ನಿಲಯ ನಿರ್ಮಾಣ | – | – | 5 | 115.00 | | |
| 7 | ವಿದ್ಯಾರ್ಥಿ ನಿಲಯ | – | – | 1 | 360.00 | | |
| 8 | ಗಡಿ ಭಾಗದ ತುಳು ಸಾಹಿತ್ಯ ಅಕಾಡೆಮಿ ಕಟ್ಟಡ ನಿರ್ಮಾಣ ಮುಂದುವರೆದ ಕಾಮಗಾರಿ | – | – | 1 | 300.00 | | |
| 9 | ಗಡಿ ಭಾಗದ ಮಂಗಳೂರಿನಲ್ಲಿ ನೂತನವಾಗಿ ನಿರ್ಮಿಸಲಿರುವ ಬ್ಯಾರಿ ಸಾಹಿತ್ಯ ಅಕಾಡೆಮಿ ಕಟ್ಟಡ ಕಾಮಗಾರಿ | – | – | 1 | 300.00 | | |
| 10 | ಗಡಿ ಭಾಗದ ಮಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ರಂಗಮಂದಿರದ ಮುಂದುವರೆದ ಕಾಮಗಾರಿಗೆ | | | 1 | 500.00 | | |
| 11 | ಗಡಿ ಭಾಗದ ಮಡಿಕೇರಿಯಲ್ಲಿ ನಿರ್ಮಿಸಲಾಗುತ್ತಿರುವ ಸಾಂಸ್ಕೃತಿಕ ಸಮುಚ್ಚಯ ಭವನದ ಮುಂದುವರೆದ ಕಾಮಗಾರಿ | – | – | 1 | 500.00 | | |
| 12 | ಗಡಿ ಭಾಗದ ವಿಜಯಪುರದಲ್ಲಿ ಕಂದಗಲ್ ಹನುಮಂತರಾಯ್ ರಂಗಮಂದಿರದ ಮುಂದುವರೆದ ಕಾಮಗಾರಿಗಾಗಿ | – | – | 1 | 75.00 | | |
| 13 | ಗಡಿ ಭಾಗದ ಬೀದರ್ ನಲ್ಲಿಕನ್ನಡ ಭವನ ನಿರ್ಮಾಣ ಕಾಮಗಾರಿ | – | – | 1 | 100.00 | | |
| 14 | ಗಡಿ ಭಾಗದ ಯಾದಗಿರಿ ನಗರಸಭೆ ವ್ಯಾಪ್ತಿಯಲ್ಲಿ ಗಾಂಧಿ ಭವನ ನಿರ್ಮಾಣ ಮಾಡುವ ಸಂಬಂಧ ನಿವೇಶನ ಖರೀದಿಗಾಗಿ ಅನುದಾನ. | – | – | 1 | 200.00 | | |
| 15 | ಗಡಿ ಭಾಗದ ಬೆಳಗಾವಿ ಸಾಹಿತ್ಯ ಭವನ ಕಟ್ಟಡದ ನಿರ್ಮಾಣದ ಉಳಿದ ಕಾಮಗಾರಿಗೆ | – | – | 1 | 327.00 | | |
| 16 | ಗಡಿ ಭಾಗದಲ್ಲಿ ಶಾಲಾ ಕಾಂಪೌಂಡ್ | 3 | 65.00 | 16 | 180.00 | 3 | 12.95 |
| 17 | ಗಡಿ ಭಾಗದಲ್ಲಿ ಆಟದ ಮೈದಾನ ನಿರ್ಮಾಣ | – | – | 2 | 8.00 | | |

| | | | | | | | |
|---|---|---|---|---|---|---|---|
| 18 | ಗಡಿ ಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ | – | – | 4 | 71.88 | | |
| 19 | ಗಡಿ ಭಾಗದ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ | – | – | 3 | 30.00 | 2 | 37.00 |
| 20 | ಗಡಿ ಭಾಗದ ಸಾಂಸ್ಕೃತಿಕ ಭವನ ನಿರ್ಮಾಣ | 2 | 12.50 | 48 | 1203.50 | 7 | 94.17 |
| 21 | ಗಡಿ ಭಾಗದಲ್ಲಿ ಗ್ರಂಥಾಲಯ ನಿರ್ಮಾಣ | – | – | 6 | 105.00 | | |
| 22 | ಗಡಿ ಭಾಗದಲ್ಲಿ ಕ್ರೀಡಾ ಕೊಠಡಿ/ಕ್ರೀಡಾ ಭವನ ನಿರ್ಮಾಣ | – | – | 5 | 102.50 | | |
| 23 | ಗಡಿ ಭಾಗದಲ್ಲಿ ರಸ್ತೆ/ಚರಂಡಿ ಕಾಮಗಾರಿಗಳು | 6 | 549.90 | 33 | 676.78 | 16 | 679.44 |
| 24 | ಗಡಿ ಭಾಗದಲ್ಲಿ ಹೈಮಾಸ್ಟ್ ದೀಪ ಅಳವಡಿಕೆ | 3 | 85.00 | 2 | 100.00 | 1 | 22.67 |
| 25 | ಶಿಕ್ಷಕರ ವಸತಿ ಸಮುಚ್ಛಯ | | | | | 1 | 9.00 |
| 26 | ವಿವಿಧ/ಯೋಜನೆ/ಕಾಮಗಾರಿ | | | | | 4 | 151.24 |
| | **ಒಟ್ಟು** | **18** | **769.90** | **329** | **6581.96** | **52.00** | **1420.97** |


ಸೊಲ್ಲಾಪುರ ಶ್ರೀ ಸಿದ್ದರಾಮೇಶ್ವರ ದೇವಾಲಯ



ಗೋಲಗುಂಬಜ್, ವಿಜಯಪುರ



ಕರ್ನಾಟಕ ಸರ್ಕಾರದ ಗೌರವಾನ್ವಿತ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿರವರನ್ನು
ಡಾ. ಸಿ. ಸೋಮಶೇಖರ ಭಾ.ಆ.ಸೇ(ನಿ), ಅಧ್ಯಕ್ಷರು,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ರವರು
ಅಭಿನಂದಿಸಿದ ಸಂದರ್ಭ.



ಕಾಸರಗೋಡಿನ ಕನ್ನಡ ಗ್ರಾಮಗಳ ಹೆಸರನ್ನು ಮಲಯಾಳೀಕರಣ
ಮಾಡದಂತೆ ಕೇರಳ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲು ಕೋರಿ
ಅಂದಿನ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುತ್ತಿರುವುದು.



ಕರ್ನಾಟಕ ಸರ್ಕಾರದ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ
ಸಚಿವರಾದ  ಸನ್ಮಾನ್ಯ ಶ್ರೀ ವಿ. ಸುನೀಲ್ ಕುಮಾರ್ ಅವರನ್ನು
ಡಾ. ಸಿ. ಸೋಮಶೇಖರ ಭಾ.ಆ.ಸೇ (ನಿ), ಅಧ್ಯಕ್ಷರು,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ರವರು ಅಭಿನಂದಿಸಿದ ಸಂದರ್ಭ.



ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ
ಡಾ. ಸಿ. ಎನ್. ಅಶ್ವಥನಾರಾಯಣರವರ ಉಪಸ್ಥಿತಿಯಲ್ಲಿ ನಡೆದ
ಬೆಂಗಳೂರು ನಗರ ಕನ್ನಡ ರಾಜ್ಯೋತ್ಸವ ಸಮಾರಂಭ



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಾಡೋಜ ಡಾ. ಚಂದ್ರಶೇಖರ ಕಂಬಾರರವರಿಗೆ
ಪದ್ಮಭೂಷಣ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅಂದಿನ ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ
ಶ್ರೀ ಅರವಿಂದ ಲಿಂಬಾವಳಿಯವರು ಅಭಿನಂದಿಸುತ್ತಿರುವುದು.



ಕಾಸರಗೋಡಿನ ಕೆಲವು ಗ್ರಾಮಗಳ ಹೆಸರುಗಳನ್ನು ಮಲೆಯಾಳಂಗೆ ಬದಲಾಯಿಸಿರುವ ಹಿನ್ನೆಲೆಯಲ್ಲಿ
ಅಗತ್ಯ ಕ್ರಮಕ್ಕೆ ಒತ್ತಾಯಿಸಿ ಮುಖ್ಯ ಕಾರ್ಯದರ್ಶಿ ಶ್ರೀ ಪಿ. ರವಿಕುಮಾರ್ ಅವರಿಗೆ ಮನವಿ ಸಲ್ಲಿಕೆ.



ಡಾ.ಸಿ. ಸೋಮಶೇಖರ, ಭಾ.ಆ.ಸೇ (ನಿ) ಅಧ್ಯಕ್ಷರು,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ರವರು
ಗಡಿ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಚರ್ಚಿಸಲು ಕರ್ನಾಟಕ ಸರ್ಕಾರದ
ಗಡಿ ರಕ್ಷಣಾ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ
ಶ್ರೀ ಕೆ.ಎಲ್. ಮಂಜುನಾಥ ರವರನ್ನು ಭೇಟಿ ಮಾಡಿದ ಸಂದರ್ಭ



ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ
ಡಾ. ಸಿ ಸೋಮಶೇಖರ, ಭಾ.ಆ.ಸೇ(ನಿ.), ಇವರು
ದಿನಾಂಕ: 26–3–2021ರಂದು ನಡೆದ ಗಡಿ ಪ್ರಾಧಿಕಾರದ
ಸಾಮಾನ್ಯ ಸಭೆಗೆ ಶ್ರೀ ಟಿ.ಎಸ್. ನಾಗಾಭರಣ, ಸದಸ್ಯರು,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅಧ್ಯಕ್ಷರು,
ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರನ್ನು ಸ್ವಾಗತಿಸಿದ ಸಂದರ್ಭ.



ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ
ಡಾ. ಸಿ ಸೋಮಶೇಖರ, ಭಾ.ಆ.ಸೇ(ನಿ.), ಇವರು
ದಿನಾಂಕ: 26–3–2021ರಂದು ನಡೆದ ಗಡಿ ಪ್ರಾಧಿಕಾರದ
ಸಾಮಾನ್ಯ ಸಭೆಗೆ ಶ್ರೀ ಬಿ.ವಿ ವಸಂತ ಕುಮಾರ್, ಸದಸ್ಯರು,
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅಧ್ಯಕ್ಷರು,
ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರನ್ನು ಸ್ವಾಗತಿಸಿದ ಸಂದರ್ಭ.



ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಅವರು
ಗಡಿ ಅಭಿವೃದ್ಧಿ ಪ್ರಾಧಿಕಾರದ ವಿವಿಧ ಯೋಜನೆಗಳ ಅನುಷ್ಠಾನದ
ವಿಮರ್ಶೆ ಸಭೆಯಲ್ಲಿ ವಿಜಯಪುರ ಜಿಲ್ಲಾಧಿಕಾರಿ
ಪಿ. ಸುನಿಲ್ ಕುಮಾರ್, ಗಡಿ ಪ್ರಾಧಿಕಾರದ ಕಾರ್ಯದರ್ಶಿ
ಪ್ರಕಾಶ್ ಮತ್ತೀಹಳ್ಳಿ ಹಾಗೂ ಇತರ ಅಧಿಕಾರಿಗಳು
ಭಾಗವಹಿಸಿರುವುದು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ
ಮಂಜೂರಾದ ಕಾಮಗಾರಿಗಳ ಬಗ್ಗೆ ದಿನಾಂಕ:15-2-2021
ರಂದು ಚಾಮರಾಜನಗರ ಜಿಲ್ಲೆಯ
ಅಪರ ಜಿಲ್ಲಾಧಿಕಾರಿಗಳಾದ
ಶ್ರೀಮತಿ ಕಾತ್ಯಾಯನಿದೇವಿ ಇವರೊಂದಿಗೆ
ಗಡಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ
ರವರು ಪ್ರಗತಿ ಪರಿಶೀಲನಾ ಸಭೆ ನಡೆಸಿರುವುದು.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ
ಮಂಜೂರಾದ ಕಾಮಗಾರಿಗಳ ಬಗ್ಗೆ ದಿನಾಂಕ:27-01-2021
ರಂದು ವಿಜಯಪುರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ
ಶ್ರೀ ಸುನೀಲ್ ಕುಮಾರ್ ಇವರೊಂದಿಗೆ
ಗಡಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ
ರವರು ಹಾಗೂ ಗಡಿ ಪ್ರಾಧಿಕಾರದ ಕಾರ್ಯದರ್ಶಿಗಳಾದ
ಶ್ರೀ ಪ್ರಕಾಶ ಮತ್ತೀಹಳ್ಳಿ ಇವರು ಪ್ರಗತಿ ಪರಿಶೀಲನಾ
ಸಭೆ ನಡೆಸಿರುವುದು.



ದಿನಾಂಕ: 14-12-2020ರಂದು ಮಾನ್ಯ ಅಧ್ಯಕ್ಷರು,
ಗಡಿ ಅಭಿವೃದ್ಧಿ ಪ್ರಾಧಿಕಾರ ಇವರ
ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆ



ಕೊಳ್ಳೆಗಾಲದ ಮಹಾದೇಶ್ವರ ಪ್ರಥಮ ದರ್ಜೆ ಕಾಲೇಜಿನ
ಹತ್ತಿರ ನಿರ್ಮಾಣವಾಗುತ್ತಿರುವ ಗಡಿ ಭವನ
ಕಾಮಗಾರಿಯ ಪರಿಶೀಲನೆ





ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಶೇಖರ

# ಗಡಿ ಕನ್ನಡಿಗರ ಅಭಿವೃದ್ಧಿಯೇ ಧ್ಯೇಯ

ಬೆಳಗಾವಿ ಜಿಲ್ಲೆ ಅಥಣಿಯ ಮೋಟಗಿ ಮಠದಲ್ಲಿ  ನಡೆದ ಶರಣ ಸಂಸ್ಕೃತಿ ಮೇಳದಲ್ಲಿ
ಗಡಿ ಕನ್ನಡಿಗರ ಅಭಿವೃದ್ಧಿ ಬಗ್ಗೆ ವಿಚಾರ ಮಂಥನ



ಭಾಲ್ಕಿಯಲ್ಲಿ ನಡೆದ ಗಡಿಭಾಗದಲ್ಲಿ ಕನ್ನಡ ಜಾಗೃತಿ ಸಭೆ ಉದ್ಘಾಟನಾ ಸಮಾರಂಭ



ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ, ಭಾ.ಆ.ಸೇ(ನಿ), ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 16–07–2021 ರಂದು ನಡೆದ ಗಡಿ ಪ್ರಾಧಿಕಾರದ ಸಭೆಯಲ್ಲಿ ಪ್ರಾಧಿಕಾರದ ಮಾನ್ಯ ಸದಸ್ಯರಾದ ಶ್ರೀ ಬಿ.ವಿ. ವಸಂತ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಮನು ಬಳಿಗಾರ್ ಮತ್ತು ಪ್ರಾಧಿಕಾರದ ಕಾರ್ಯದರ್ಶಿಯವರು ಚರ್ಚೆ ನಡೆಸುತ್ತಿರುವುದು.



ಬೀದರ್‌ನಲ್ಲಿ ವಿವಿಧ ಸಂಘ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಗಡಿ ಅಭಿವೃದ್ಧಿ ಸಮಾಲೋಚನಾ ಸಭೆಯಲ್ಲಿ ವಿವಿಧ ಗಣ್ಯರೊಂದಿಗೆ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಅವರು ಪಾಲ್ಗೊಂಡಿರುವುದು.



ಕರವೇ ಉತ್ತರ ಕರ್ನಾಟಕ ಅಧ್ಯಕ್ಷರಾದ ಡಾ. ಶರಣು ಬಿ. ಗದ್ದುಗೆ ಅವರು ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಅವರನ್ನು ಗೌರವಿಸಿ ಗಡಿ ಭಾಗದ ಸಮಸ್ಯೆ ಕುರಿತು ಚರ್ಚೆ ನಡೆಸಿದ ಸಂದರ್ಭ

# ಅಜಿತ್ ಪವಾರ್ ಹೇಳಿಕೆಗೆ ಗಡಿ ಅಧ್ಯಕ್ಷರ ಖಂಡನೆ

ಶರಣಾರ್ಥಿ ಕನ್ನಡಿಗರೆ ಸುದ್ದಿ

**ಬೆಂಗಳೂರು: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಬೆಳಗಾವಿ ಕುರಿತಾದ ಹೇಳಿಕೆ ಅವರ ಉದ್ಧಟತನದ ಪ್ರತೀಕ. ಮಹಾಜನ್ ಆಯೋಗದ ತೀರ್ಪೇ ಅಂತಿಮ. ಬೆಳಗಾವಿಯಲ್ಲಿನ ಜನರೆಲ್ಲರೂ ಕನ್ನಡ ಮನಸ್ಸುಳ್ಳ ನಮ್ಮ ಸಹೋದರರು, ಭೌಗೋಳಿಕವಾಗಿ ಸಾಂಸ್ಕೃತಿಕವಾಗಿ ಬೆಳಗಾವಿ ಕನ್ನಡ ನಾಡಿನ ಅವಿಭಾಜ್ಯ ಭಾಗ. ಕನ್ನಡ ನಾಡಿನ ಅಖಂಡತೆಯ ಬಗ್ಗೆ ಅಪಸ್ವರ ಎತ್ತುವವರಿಗೆ ಎಚ್ಚರಿಕೆ. ಶ್ರೀ ಅಜಿತ್ ಪವಾರ್ ಅವರ ಹೇಳಿಕೆಯನ್ನು ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ಈಗಾಗಲೇ ಬಹಳ ಗಟ್ಟಿ ಧ್ವನಿಯಲ್ಲಿ ಖಂಡಿಸಿದ್ದಾರೆ. ಈಗಾಗಲೇ ಇತ್ಯರ್ಥ ಆಗಿರುವ ವಿಷಯಗಳ ಬಗ್ಗೆ ಅನಗತ್ಯ ತಗಾದೆ ತೆಗೆದು ಬೆಳಗಾವಿಯಲ್ಲಿ ಸೌಹಾರ್ದತೆಯಿಂದ ಸಹ ಬಾಳ್ವೆ ನಡೆಸುತ್ತಿರುವ ಭಾಷೆ ಮರಾಠಿಯಾದರು ಕನ್ನಡ ಅಸ್ಮಿತೆ ಕಾಪಾಡಿಕೊಂಡು ಬಂದಿರುವ ನಮ್ಮ ಸಹೋದರರಲ್ಲಿ ವಿಷ ಬೀಜ ಬಿತ್ತುವುದನ್ನು ನಾವು ಸಹಿಸುವುದಿಲ್ಲ ಎಂದು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಡಾ.ಸಿ. ಸೋಮಶೇಖರ ಅವರು ಖಂಡಿಸಿದ್ದಾರೆ.**

**ಗಡಿ ಅಧ್ಯಕ್ಷರಿಂದ ಆಯವ್ಯಯ ಪೂರ್ವಭಾವಿ ಬೇಡಿಕೆ ಸಲ್ಲಿಕೆ**



**ಬೆಂಗಳೂರು: ಡಾ. ಸಿ. ಸೋಮಶೇಖರ, ಅಧ್ಯಕ್ಷರು, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು 2021–22ನೇ ಸಾಲಿನ ಆಯವ್ಯಯದ ಪೂರ್ವಭಾವಿ ಬೇಡಿಕೆ ಅಂದಾಜು ಬಗ್ಗೆ ಶ್ರೀ ಬಿ.ಜೆ. ಪುಟ್ಟಸ್ವಾಮಿ, ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ ಇವರಿಗೆ ಮನವಿ ಸಲ್ಲಿಸಿದರು.**

# 'ಗಡಿ ಭಾಗದ ಸಮಸ್ಯೆಗಳಿಗೆ ಸ್ಪಂದನೆ'

**ಸಂ. ಕ. ಸಮಾಚಾರ ಶಹಾಪುರ**

ರಾಜ್ಯಸರ್ಕಾರ ಗುರುತಿಸಲ್ಪಟ್ಟ ಗಡಿ ಭಾಗದಲ್ಲಿ ಇರುವ ಜನತೆಯ ಹಾಗೂ ಪ್ರದೇಶಗಳಲ್ಲಿನ ಸಮಸ್ಯೆಗಳನ್ನು ಗುರುತಿಸಿ ಕೂಡಲೇ ಪ್ರಾಧಿಕಾರದಿಂದ ಹಾಗೂ ಹೆಚ್ಚಿನ ಸಹಾಯಕ್ಕಾಗಿ ಸರಕಾರದಿಂದ ಬಗೆಹರಿಸುವುದೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾಯಕವಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ ತಿಳಿಸಿದರು.

ಬೆಂಗಳೂರಿನ ತಮ್ಮ ನಿವಾಸದ ಸ್ನೇಹ ಶ್ರೀ ಸಾಂಸ್ಕೃತಿಕಲೋಕದತಾಣದಲ್ಲಿಶಹಾ ಪರಿನಕರವೇ ಉತ್ತರ ಕರ್ನಾಟಕ ಅಧ್ಯಕ್ಷ ಡಾ.ಶರಣು.ಬಿ.ಗದ್ದುಗೆ ಅವರಿಂದ ಸನ್ಮಾನ ಗೌರವ ಸ್ವೀಕರಿಸಿ ಮಾತನಾಡಿ. ಕನ್ನಡ ಸಾಹಿತ್ಯ, ಸಂಗೀತ, ಜಾನಪದ, ಕಲೆ, ಶಿಕ್ಷಣ, ಮುಂತಾದವುಗಳು ಅಭಿವೃದ್ಧಿ ಮಾಡುವುದು ಪ್ರಾಧಿಕಾರದ ಕಾಯಕ ಹಾಗೂ ನನ್ನ ಕಾಯಕ ಆಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಪ್ರಮುಖರು ಆನೇಕರು ಇದ್ದರು

ಸಂಯುಕ್ತ ಕರ್ನಾಟಕ Sat, 19 December 2020
epaper.samyukthakarnataka.com



**ಚಾಮರಾಜನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರರವರು ಉದ್ಘಾಟಿಸುತ್ತಿರುವುದು. ಈ ಸಂದರ್ಭದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಎಸ್ ಸುರೇಶ್ ಕುಮಾರ್ ಮತ್ತು ಇತರೆ ಗಣ್ಯರು ಉಪಸ್ಥಿತರಿರುವರು.**



ವಿಜಯಪುರ ಜಿಲ್ಲೆಯ ಕಂದಗಲ್ಲ ಹನುಮಂತರಾಯ ರಂಗಮಂದಿರದ ಕಾಮಗಾರಿಯ ಸ್ಥಳ ಪರಿಶೀಲನೆ



ಶ್ರೀ ರಾಮ ಕನ್ನಡ ಮಾಧ್ಯಮ ಪ್ರೌಢಶಾಲೆ, ಪುತ್ತೂರು
ಇಲ್ಲಿನ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿ



ಎಲ್ಲೋಡು ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆ, ಗುಡಿಬಂಡೆ
(ತಾ) ಇಲ್ಲಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕ



ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಸವಿಗೊಂಡನಹಳ್ಳಿಯಲ್ಲಿ
ಅಳವಡಿಸಿರುವ ಹೈಮಾಸ್ಟ್ ದೀಪಗಳು



ಗಡಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಿರುವ
ಬೀದರ್‌ನ ಕನ್ನಡ ಭವನ ನಿವೇಶನದ ಪರಿಶೀಲನೆ



ಗಡಿ ಪ್ರಾಧಿಕಾರದಿಂದ ಮೊಳಕಾಲ್ಮೂರು ತಾಲ್ಲೂಕಿನ ನಾಗಸಮುದ್ರದಲ್ಲಿ ನಿರ್ಮಿಸಿರುವ ಸಾಂಸ್ಕೃತಿಕ ಭವನ



ಮೊಳಕಾಲ್ಮೂರು ತಾಲ್ಲೂಕಿನ ಹಾನಗಲ್ ಗ್ರಾಮದಲ್ಲಿ
ಗಡಿ ಪ್ರಾಧಿಕಾರದ ಅನುದಾನದಲ್ಲಿ ನಿರ್ಮಿಸಿರುವ
ನುಂಕೆಮಲೆ ಸಿದ್ದೇಶ್ವರ ಪ್ರೌಢ ಶಾಲೆ ಕಟ್ಟಡ




ಮೊಳಕಾಲ್ಮೂರು ತಾಲ್ಲೂಕಿನ ರಾಯಪುರದಲ್ಲಿ
ನಿರ್ಮಾಣವಾಗಿರುವ
ರಂಗ ಪರಿಸರ ಸಂಸ್ಥೆಯ ಬಯಲು ರಂಗ ಮಂದಿರ



ಬೀದರ್‌ನ ಸಮೃದ್ಧಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ
ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವತಿ ನಾಶಿ ಹಾಗೂ
ಸಂಗಡಿಗರಿಂದ 'ಗೌರಮ್ಮ ಪದ' ಪ್ರಸ್ತುತಪಡಿಸುತ್ತಿರುವುದು.



ಮೊಳಕಾಲ್ಮೂರು ತಾಲ್ಲೂಕಿನ ಸಿದ್ದಯ್ಯನ ಕೋಟೆಯಲ್ಲಿ
ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಸಾಂಸ್ಕೃತಿಕ ಭವನ



ಕಾಸರಗೋಡಿನ ಕುಂಬಳೆಯಲ್ಲಿನ ಶ್ರೀ ಕೃಷ್ಣ ಕನ್ನಡ ವಿದ್ಯಾಲಯಕ್ಕೆ
ಆವರಣ ಗೋಡೆ ನಿರ್ಮಿಸಿರುವುದು.



ಮಡಿಕೇರಿಯ ರಾಜಾಸೀಟ್‌ನಲ್ಲಿ ಸ್ಥಾಪಿಸಿರುವ
ಶುದ್ಧ ಕುಡಿಯುವ ನೀರಿನ ಘಟಕ



ಕಾಸರಗೋಡಿನ ಎಡನೀರು ಮಠದ ಕನ್ನಡ ಶಾಲೆಯ ನಿರ್ಮಾಣ ಹಂತದಲ್ಲಿರುವ ಕಟ್ಟಡ



ಬೀದರ್‌ನಲ್ಲಿ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗೆ ಪ್ರಾಧಿಕಾರದ ಅಧ್ಯಕ್ಷರು ಭೇಟಿ ನೀಡಿರುವುದು.



ಮಕ್ಕಳಲ್ಲಿ ಸಂಸ್ಕಾರದ ಬೀಜ ಬಿತ್ತಿ




ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಏತಡ್ಕ ಗ್ರಾಮದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನದಲ್ಲಿ ನಿರ್ಮಿಸಿರುವ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ



ಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನದಲ್ಲಿ ಮಹಾರಾಷ್ಟ್ರ ರಾಜ್ಯದ ಜತ್ತ ತಾಲ್ಲೂಕಿನ ಉಮದಿ ಗ್ರಾಮದಲ್ಲಿ ನಿರ್ಮಿಸಿರುವ ಎಮ್.ವಿ.ಹೈಸ್ಕೂಲ್ ಶಾಲಾ ಕಟ್ಟಡ



ಚಳ್ಳಕೆರೆ ತಾಲ್ಲೂಕಿನ ಹಿರೇಹಳ್ಳಿಯಲ್ಲಿ ನಿರ್ಮಿಸಿರುವ
ಉಜನಿ ಪ್ರೌಢಶಾಲೆ ಕೊಠಡಿಗಳು.



ವಿಜಯಪುರ ತಾಲ್ಲೂಕು, ಕನಮಡಿ ಸಾಂಸ್ಕೃತಿಕ ಭವನ



ಕಲ್ಪವೃಕ್ಷ ಸಾಂಸ್ಕೃತಿಕ ವೇದಿಕೆ, ಕಾಸರಗೋಡು– ಯಕ್ಷತೋಣೆರಾ
ಸಂಸ್ಥೆಯ ಆಶ್ರಯದಲ್ಲಿ ನಡೆದ ಯಕ್ಷಗಾನ ಪ್ರಸಂಗ



ಶ್ರೀ ಏಕನಾಥೇಶ್ವರಿ ಶಿಕ್ಷಣ ಗ್ರಾಮೀಣ ನಗರಾಭಿವೃದ್ಧಿ ಸಂಸ್ಥೆ(ರಿ)
ಹೊಸಕೆರೆ–ಸಾಂಸ್ಕೃತಿಕ ಕಾರ್ಯಕ್ರಮ

## ಇತರೆ ಸುದ್ದಿಗಳು

### ಕಾಸರಗೋಡಿನ ಕೆಲವು ಗ್ರಾಮಗಳ ನಾಮಕರಣ ಆಕ್ರಮ: ಅಗತ್ಯ ಕ್ರಮಕ್ಕೆ ಒತ್ತಾಯಿಸಿ ಮುಖ್ಯ ಕಾರ್ಯದರ್ಶಿಗೆ ಡಾ. ಸಿ. ಸೋಮಶೇಖರ್ ಮನವಿ



## ಗಡಿ ಹಳ್ಳಿ ಹೆಸರು ಬದಲಿಸಬೇಡಿ





# 63 ಗಡಿ ತಾಲೂಕುಗಳಲ್ಲಿ ಕನ್ನಡ ಸಂಸ್ಕೃತಿ ಉತ್ಸವ

## ಕೋಲಾರದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಶೇಖರ್ ಮಾಹಿತಿ

■ ವಿಜಯವಾಣಿ ಸುದ್ದಿಜಾಲ ಕೋಲಾರ

ರಾಜ್ಯದ ಗಡಿಭಾಗದ 63 ತಾಲೂಕುಗಳಲ್ಲಿ ಕನ್ನಡ ಸಂಸ್ಕೃತಿ ಉತ್ಸವ ಆಚರಿಸಲಾಗುವುದು ಎಂದು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಂಗ ಸಭಾಂಗಣದಲ್ಲಿ ಮಂಗಳವಾರ ಕರೆದಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಗಡಿ ಭಾಗದ ಕನ್ನಡಿಗರ ಅಸ್ಮಿತೆ ಮತ್ತು ಸಂಸ್ಕೃತಿ ಕಾಪಾಡುವ ಉದ್ದೇಶದಿಂದ 2010ರಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಮಾಡಲಾಯಿತು ಎಂದರು.

ಪ್ರಾಧಿಕಾರದಿಂದ ಗಡಿ ಭಾಗದಲ್ಲಿ ಕನ್ನಡ ಸಂಸ್ಕೃತಿ ಉತ್ಸವ, ಗಡಿ ಭಾಗದ ಕನ್ನಡಿಗರ ಸಂಸ್ಕೃತಿ ಬೆಳೆಸಲು ಕನ್ನಡ ಹೋರಾಟಗಾರರ ಮತ್ತು ದಾರ್ಶನಿಕರ ಸ್ಮಾರಕ, ಸಾಕ್ಷ್ಯಚಿತ್ರ ರಚನೆ, ಗಡಿಭಾಗದ ಹೆದ್ದಾರಿಯಲ್ಲಿ ಸ್ವಾಗತ ಧ್ವಜಸ್ತಂಭ ನಿರ್ಮಾಣ, ಗಡಿಭಾಗದ ಪ್ರೌಢ ಪ್ರಬಂಧ ಬರೆದಿರುವವರ ಪುಸ್ತಕ ಪ್ರಕಟಣೆಗೆ ಸಹಾಯ ಮಾಡಲಾಗುವುದು ಎಂದರು.

ಗಡಿ ಪ್ರದೇಶಗಳಲ್ಲಿ ಜನರು ಬಹುಭಾಷಿತ ಬಹು ಸಂಸ್ಕೃತಿ ಒಳಗೊಂಡಿರುತ್ತಾರೆ. ಅವರಿಗೆ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸಬೇಕು. ಗಡಿಭಾಗದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಶಾಲೆ, ಆಸ್ಪತ್ರೆ, ರಸ್ತೆ, ಮೂಲ ಸೌಕರ್ಯ ಕಲ್ಪಿಸಬೇಕು ಎಂದರು. ಈ ವರ್ಷ ಶೈಕ್ಷಣಿಕವಾಗಿ ಗಡಿ ಭಾಗದಲ್ಲಿ ಶಾಲಾಕಟ್ಟಡ, ಕೌಶಲ್ಯ, ಗ್ರಂಥಾಲಯ ನಿರ್ಮಿಸಲಾಗುವುದು. ಜಿಲ್ಲೆಯ ಮುಳಬಾಗಿಲು, ಬಂಗಾರಪೇಟೆ, ಕೆಜಿಎಫ್, ಮಾಲೂರು ಮತ್ತು ಶ್ರೀನಿವಾಸಪುರದಲ್ಲಿ ಈ ಸಂಬಂಧ ಕಾಮಗಾರಿಗಳಿದ್ದರೆ ಕೈಗೆತ್ತಿಕೊಳ್ಳಲಾಗುವುದು ಎಂದರು. ಡಿಸಿ ಡಾ. ಆರ್.ಸೆಲ್ವಮಣಿ, ಜಿಪಂ ಸಿಇಒ ಎನ್.ಎಂ.ನಾಗರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಿ.ಎಂ. ರವಿಕುಮಾರ್, ತಹಸೀಲ್ದಾರ್ ಶೋಭಿತಾ ಇತರರು ಪಾಲ್ಗೊಂಡಿದ್ದರು.



ಕೋಲಾರ ಜಿಲ್ಲಾಡಳಿತ ಭವನದಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಪ್ರಗತಿ ಪರಿಶೀಲನೆ ನಡೆಸಿದರು. ಡಿಸಿ ಡಾ. ಆರ್.ಸೆಲ್ವಮಣಿ, ಜಿಪಂ ಸಿಇಒ ನಾಗರಾಜ್ ಇತರರು ಇದ್ದರು.

### ನಮ್ಮ ಧ್ವನಿಗೆ ಸಂದ ಜಯ

ನೆರೆ ರಾಜ್ಯ ಕೇರಳದಲ್ಲಿ ಗ್ರಾಮಗಳ ಕನ್ನಡದ ಹೆಸರು ಬದಲಾಯಿಸುವ ಉದ್ದೇಶವಿಲ್ಲ ಎಂದು ಅಲ್ಲಿನ ಶಾಸಕರು ಹೇಳಿರುವುದು ಗಡಿ ಅಭಿವೃದ್ಧಿ ಪ್ರಾಧಿಕಾರ ಎತ್ತಿದ ಧ್ವನಿಗೆ ಸಂದ ಜಯ. ರಾಜ್ಯದ ಗಡಿಭಾಗದಲ್ಲಿರುವ ಕೇರಳದಲ್ಲಿ ಕನ್ನಡದ ಹೆಸರು ಬದಲಿಸುತ್ತಿರುವ ಬಗ್ಗೆ ಪ್ರಾಧಿಕಾರ ಮೊದಲು ಧ್ವನಿ ಎತ್ತಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೂಲಕ ಕೇರಳ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಕನ್ನಡದ ಹೆಸರನ್ನು ಸರ್ಕಾರ ಬದಲಿಸಿಲ್ಲ ಎಂದು ಆ ಭಾಗದ ಶಾಸಕರು ಹೇಳಿದ್ದಾರೆ. ಆದರೆ ಸ್ಥಳೀಯವಾಗಿ ಹೆಸರು ಬದಲಿಸಲಾಗಿದೆಯೋ ಎಂಬುದನ್ನು ಪರಿಶೀಲನೆ ನಡೆಸಲಾಗುವುದು ಎಂದು ಸೋಮಶೇಖರ್ ಹೇಳಿದರು.







ಗಡಿ ಅಭಿವೃದ್ಧಿ ಪ್ರಾಧಿಕಾರದ ಧನ ಸಹಾಯದಲ್ಲಿ ನಿರ್ಮಿಸಿರುವ ಜಾಡರ ಬಬಲಾದ ಗ್ರಾಮದಲ್ಲಿನ ಗಜಾನನ ಹೈಸ್ಕೂಲ್ ಸಾಂಸ್ಕೃತಿಕ ಭವನ






ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಸಾಂಗಲಿ ಜಿಲ್ಲೆಯ ಶ್ರೀ ಗುರು ಬಸವ ವಿದ್ಯಾಮಂದಿರ ಶಾಲೆಯಲ್ಲಿ
ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅನುದಾನದಲ್ಲಿ ನಿರ್ಮಿಸಿರುವ ಗಣಕ ಯಂತ್ರ ಕೊಠಡಿ





ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಾಂಪುರ ಗ್ರಾಮದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನದಲ್ಲಿ ನಿರ್ಮಿಸಿರುವ
ಜಟಂಗಿ ರಾಮೇಶ್ವರ ಎಸ್.ಪಿ.ಎಸ್.ಆರ್. ಕನ್ನಡ ಪ್ರೌಢ ಶಾಲೆ ಕಟ್ಟಡ ಮತ್ತು ಗ್ರಂಥಾಲಯ ಕೊಠಡಿ



ಬಾಗೇಪಲ್ಲಿ ತಾಲ್ಲೂಕು, ಗೂಳೂರು ತಿಮ್ಮಪಲ್ಲಿ ರಸ್ತೆಯಿಂದ ಲಕ್ಷ್ಮಣ ತಾಂಡಕ್ಕೆ ಹೋಗುವ ರಸ್ತೆ ಅಭಿವೃದ್ಧಿ



ಮಹಾರಾಷ್ಟ್ರದ ಅಕ್ಕಲಕೋಟದಲ್ಲಿ ಪ್ರಾಧಿಕಾರದ ಧನ ಸಹಾಯದಿಂದ ನಿರ್ಮಿಸಿರುವ ಚಿ ಸೌ ಸುರೇಖ ಕಲ್ಯಾಣಶೆಟ್ಟಿ ವಿದ್ಯಾಲಯ ಶಾಲಾ ಕಟ್ಟಡ



ಗುಡಿಬಂಡೆ ತಾಲ್ಲೂಕು ಬೀಜಗಾನಹಳ್ಳಿಯಲ್ಲಿ ಪ್ರಾಧಿಕಾರವು ನಿರ್ಮಿಸಿರುವ ಸಾಂಸ್ಕೃತಿಕ ಭವನ



ಮಹಾರಾಷ್ಟ್ರದ ಅಕ್ಕಲಕೋಟ ತಾಲ್ಲೂಕಿನ ತಡವಳದಲ್ಲಿ ಪ್ರಾಧಿಕಾರವು ನಿರ್ಮಿಸಿರುವ ಜಯಶಂಕರ ಹೈಸ್ಕೂಲ್‌ನ ಗ್ರಂಥಾಲಯ ಕಟ್ಟಡ



ಸರ್ಕಾರಿ ಪ್ರಾಥಮಿಕ ಶಾಲೆ,
ಪಾವಗಡ–ಶಾಲಾ ಕೊಠಡಿ



ಕುಂದುರ್ಪಮ್ಮ ಸಾಂಸ್ಕೃತಿಕ ಕಲಾ ಸಂಘ–ಸಾಂಸ್ಕೃತಿಕ ಭವನ,
ಕುಂದುರ್ಪಿ, ಅನಂತಪುರ ಜಿಲ್ಲೆ



ಕಾಸರಗೋಡಿನಲ್ಲಿ ನಾಡೋಜ ಕಯ್ಯಾರ ಕಿಞ್ಞಣ್ಣ ರೈ ರವರಿಗೆ ಅವರ
ಜನ್ಮದಿನೋತ್ಸವ ಸಂದರ್ಭದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಸನ್ಮಾನ



ನಾರಾಯಣಮಂಗಲ ಶಾಲೆ,
ಕಾಸರಗೋಡು ಜಿಲ್ಲೆ–ಬಯಲು ರಂಗಮಂದಿರ



ನ್ಯೂ ಕನ್ನಡ ಮಾಧ್ಯಮಿಕ ವಿದ್ಯಾಲಯ,
ಮೊರಬಗಿ, ಜತ್ತ ತಾಲ್ಲೂಕು, ಮಹಾರಾಷ್ಟ್ರ–ಶಾಲಾ ಕಟ್ಟಡ



ಬಂಜಾರ ಸಾಂಸ್ಕೃತಿಕ ಕಲಾ ಮಂಡಲ(ರಿ)
ಮಾನ್ವಿ ತಾಲ್ಲೂಕು–ಸಾಂಸ್ಕೃತಿಕ ಕಾರ್ಯಕ್ರಮ




ಭಾರತಿ ವಿದ್ಯಾಪೀಠ ಬದಿಯಡ್ಕ, ಕಾಸರಗೋಡು ಜಿಲ್ಲೆ
–ಶೌಚಾಲಯ ನಿರ್ಮಾಣ



ಮಹಾಜನ ಹೈಸ್ಕೂಲು, ನೀರ್ಚಾಲು,
ಕಾಸರಗೋಡು–ಗ್ರಂಥಾಲಯ ಕಟ್ಟಡ



ಶ್ರೀರಾಧಾಕೃಷ್ಣ ಗ್ರಾಮಾಂತರ ಪ್ರೌಢಶಾಲೆ, ಗೋಸೀಕೆರೆ
ಚಳ್ಳಕೆರೆ ತಾಲ್ಲೂಕು–ಶಾಲಾ ಕೊಠಡಿ ನಿರ್ಮಾಣ



ಲಯನ್ಸ್ ಕನ್ನಡ ಶಾಲೆ, ಇಂಡಿ–ಶಾಲಾ ಕೊಠಡಿ ನಿರ್ಮಾಣ




ವಿದ್ಯಾವರ್ಧಕ ಕನ್ನಡ ಮಾಧ್ಯಮ ಶಾಲೆ
ಮೀಯಪದವು, ಕಾಸರಗೋಡು–ಶಾಲಾ ಕೊಠಡಿ ನಿರ್ಮಾಣ



ಶಿಕ್ಷಕರ ವಸತಿ ಗೃಹ, ಚೇಳೂರು,
ಬಾಗೇಪಲ್ಲಿ ತಾಲ್ಲೂಕು



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ಕಾಮಗಾರಿಗಳ ಬಗ್ಗೆ ದಿನಾಂಕ: 29-6-2021 ರಂದು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಡಾ. ಸೆಲ್ವಮಣಿ ಆರ್. ಇವರೊಂದಿಗೆ ಗಡಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ರವರು ಪ್ರಗತಿ ಪರಿಶೀಲನಾ ಸಭೆ ನಡೆಸಿರುವುದು.



ಕರ್ನಾಟಕ ಸಾಹಿತ್ಯ ಸಂಘ (ರಿ.), ಬೀದರ್ ಆಶ್ರಯದಲ್ಲಿ ಕರ್ನಾಟಕದ ಗಡಿ ಸಮಸ್ಯೆಗಳ ಕುರಿತು ಆಯೋಜಿಸಿದ್ದ ಚಿಂತನಾ ಶಿಬಿರದಲ್ಲಿ ಪಾಲ್ಗೊಂಡ ಬೀದರ್ ಭಾಗದ ಕನ್ನಡದ ಚಿಂತಕರು




ಶ್ರೀ ಅರವಿಂದ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಗುಡಿಬಂಡೆ ತಾ॥, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿನ ಶಾಲಾ ಕೊಠಡಿಗಳ ನಿರ್ಮಾಣಕಾಮಗಾರಿ



ದಿನಾಂಕ: 02–08–2021 ರಂದು ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳು, ಕಾಮಗಾರಿಗಳು ಮತ್ತು ಜಿಲ್ಲೆಯ ಗಡಿ ಭಾಗದಲ್ಲಿನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಭಾ.ಆ.ಸೇ (ನಿ) ರವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಮಾನ್ಯ ಶ್ರೀ ಆದಿತ್ಯ ಆಮ್ಲಾನ್ ಬಿಸ್ವಾಸ್ ಭಾ.ಆ.ಸೇ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ಜಿಲ್ಲೆ, ಮಾನ್ಯ ಶ್ರೀ ಎಂ.ಜಿ. ಹಿರೇಮಠ್ ಭಾ.ಆ.ಸೇ, ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಹಾಗೂ ಶ್ರೀ ಲಕ್ಷ್ಮಣ ನಿಂಬರಗಿ, ಭಾ.ಪೋ.ಸೇ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ ಜಿಲ್ಲೆ ಹಾಗೂ ಮಾನ್ಯ ಶ್ರೀ ಹೆಚ್.ವಿ, ದರ್ಶನ್, ಭಾ.ಆ.ಸೇ, ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲೆ ಭಾಗವಹಿಸಿದ್ದರು.



ದಿನಾಂಕ: 07–08–2021 ರಂದು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳು, ಕಾಮಗಾರಿಗಳು ಮತ್ತು ಜಿಲ್ಲೆಯ ಗಡಿ ಭಾಗದಲ್ಲಿನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಬಗ್ಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಭಾ.ಆ.ಸೇ (ನಿ) ರವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಮಾನ್ಯ ಶ್ರೀ ವೈ.ಎಸ್. ಪಾಟೀಲ ಭಾ.ಆ.ಸೇ., ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಮತ್ತು ಮಾನ್ಯ ಶ್ರೀ ರಾಹುಲ್ ಕುಮಾರ್ ಶಹಾಪುರ್ವಾಡ, ಭಾ.ಪೋ.ಸೇ., ಮಾನ್ಯ ಶ್ರೀಮತಿ ಡಾ. ವಿದ್ಯಾ ಕುಮಾರಿ.ಕೆ ಭಾ.ಆ.ಸೇ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ತುಮಕೂರು ಜಿಲ್ಲೆ ಭಾಗವಹಿಸಿದ್ದರು.



ದಿನಾಂಕ: 23–08–2021 ರಂದು ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳು, ಕಾಮಗಾರಿಗಳು ಮತ್ತು ಜಿಲ್ಲೆಯ ಗಡಿ ಭಾಗದಲ್ಲಿನ ಅಭಿವೃದ್ಧಿ ಇಲಾಖೆಯ ಅನುಷ್ಠಾನದ ಬಗ್ಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ಭಾ.ಆ.ಸೇ (ನಿ) ರವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ಸಭೆಯಲ್ಲಿ ಮಾನ್ಯ ಶ್ರೀ ರಾಕೇಶ್ ಕುಮಾರ್ ಭಾ.ಆ.ಸೇ, ಮತ್ತು ಮಾನ್ಯ ಶ್ರೀ ಗಿರೀಶ್ ಭಾ.ಪೋ.ಸೇ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ ಜಿಲ್ಲೆ ಭಾಗವಹಿಸಿದ್ದರು.

**ಉದಯವಾಣಿ–ಹುಬ್ಬಳ್ಳಿ ದಿನಾಂಕ : 04.08.2021**

# ಗಡಿಯಲ್ಲಿ ಕನ್ನಡ ಅಸ್ಮಿತೆ ಬೆಳೆಸಲು ಕ್ರಮ

■ ಗಡಿನಾಡಲ್ಲಿ ಸಾಂಸ್ಕೃತಿಕ ಉತ್ಸವ-ಹೋರಾಟಗಾರರ ಹೆಸರಲ್ಲಿ ಪ್ರಶಸ್ತಿ: ಡಾ| ಸೋಮಶೇಖರ



## ಅನುದಾನ ಬಳಕೆ ಪರಿಶೀಲನೆಗೆ ಪತ್ರ

## ಗಡಿ ಭಾಗದ ಹಳ್ಳಿಗಳ ಅಧ್ಯಯನ

**ವಿಜಯ ಕರ್ನಾಟಕ– ತುಮಕೂರು ದಿನಾಂಕ : 08.08.2021**

ಜಿಲ್ಲೆಯ ಗಡಿ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ ಕುಂದುಕೊರತೆ ಆಲಿಸಿ| ಡಾ.ಸಿ.ಸೋಮಶೇಖರ್ ನಿರ್ದೇಶನ

# ಗಡಿ ಭಾಗದ ಪ್ರದೇಶಗಳ ಅಭಿವೃದ್ಧಿಗೆ ಕ್ರಮ



## ಅನ್ಯ ಭಾಷಿಕರಿಗೆ ಉತ್ತಮ ವಾತಾವರಣ ಕಲ್ಪಿಸಿ

## ಗಡಿ ಗ್ರಾಮದ ಶಾಲೆಗಳ ಅಭಿವೃದ್ಧಿಗೆ ಒತ್ತು ನೀಡಿ

ದಿನಾಂಕ : 16.07.2021

# ಡಾ. ಸಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಕರ್ನಾಟಕ ಗಡಿ ನಾಡಿನ ಪ್ರಾಧಿಕಾರದ ಸಭೆ



[illegible]

ಪ್ರಜಾವಾಣಿ ದಿನಾಂಕ : 24.08.2021

# ಗಡಿ ಭಾಗದ ಗ್ರಾಮಕ್ಕೆ ಭೇಟಿ ನೀಡಿ

## ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಸೂಚನೆ

ಪ್ರಜಾವಾಣಿ ವಾರ್ತೆ



ಸಭೆಯಲ್ಲಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಮಾತನಾಡಿದರು. ಜಿಲ್ಲಾಧಿಕಾರಿ ರಾಕೇಶ್‌ಕುಮಾರ್, ಎಸ್ಪಿ ಗಿರೀಶ್ ಇದ್ದರು

ರಾಮನಗರ: ಗಡಿ ಭಾಗದ ಗ್ರಾಮಗಳಲ್ಲಿ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಯನ್ನು ಸುಧಾರಿಸಿ ಅಭಿವೃದ್ಧಿಗೊಳಿಸಲು ಅಧಿಕಾರಿಗಳು ತಿಂಗಳಿಗೆ ಒಮ್ಮೆಯಾದರೂ ಅಂತಹ ಪ್ರದೇಶಗಳಿಗೆ ಭೇಟಿ ನೀಡಬೇಕು ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ರಾಮನಗರ ಜಿಲ್ಲೆಯಲ್ಲಿ ಕನಕಪುರ ತಾಲ್ಲೂಕನ್ನು ಗಡಿ ತಾಲ್ಲೂಕು ಎಂದು ಗುರುತಿಸಲಾಗಿದ್ದು, ಗಡಿ ಭಾಗದ ಜನರಿಗೆ ಸಂಸ್ಕೃತಿ, ಭಾಷೆಯ ಬಗ್ಗೆ ಗೊಂದಲ ಉಂಟಾಗಬಾರದು. ಅವರು ಯಾವುದೇ ಗೊಂದಲವಿಲ್ಲದೆ ಕನ್ನಡ ಭಾಷೆಯನ್ನು ಬಳಸಬೇಕು. ಗಡಿ ಭಾಗಗಳಲ್ಲಿ ರಸ್ತೆ ಇನ್ನಿತರ ಸ್ಥಳಗಳ ಹೆಸರು ಬದಲಾಯಿಸಲು ಪ್ರಯತ್ನಿಸುತ್ತಾರೆ. ಈ ಬಗ್ಗೆ ನಿಗಾ ವಹಿಸಬೇಕು. ಕನಕಪುರ ತಾಲ್ಲೂಕಿನ ಗಡಿ ಗ್ರಾಮಗಳ ಶಾಲೆಗಳಲ್ಲಿ ಶಿಕ್ಷಕರು ಅದರಲ್ಲೂ ಮುಖ್ಯವಾಗಿ ಕನ್ನಡ ಶಿಕ್ಷಕರ ಕೊರತೆ ಇದ್ದಲ್ಲಿ ಪ್ರಾಧಿಕಾರಕ್ಕೆ ವರದಿ ನೀಡಬೇಕು. ಶಾಲೆಯಲ್ಲಿ ಕೊಠಡಿಗಳು, ಶೌಚಾಲಯ, ಕುಡಿಯುವ ನೀರು, ಸ್ಮಾರ್ಟ್ ಕ್ಲಾಸ್, ಗ್ರಂಥಾಲಯ ವ್ಯವಸ್ಥೆಯನ್ನು ಪರಿಶೀಲಿಸಿ ವರದಿ ನೀಡಬೇಕೆಂದು ತಿಳಿಸಿದರು.

ಗಡಿ ಗ್ರಾಮಗಳ ಸಮಗ್ರ ಅಧ್ಯಯನ ಮಾಡಿ ಒಂದು ಸಣ್ಣ ಮಾಸ್ಟರ್ ಪ್ಲಾನ್ ರೂಪಿಸಬೇಕಿದೆ. ಈ ಗ್ರಾಮಗಳ ಜನರಿಗೆ ಅಂಗನವಾಡಿ, ಶಾಲೆ ರಸ್ತೆ, ಕುಡಿಯುವ ನೀರು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಉತ್ತಮ ಸೇವೆ ನೀಡಬೇಕು. ಮಹಿಳಾ ಸಂಘಟನೆಗಳಲ್ಲಿ ಮಹಿಳಾ ಸಬಲೀಕರಣ ನೀಡುವಂತೆ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮ ನಡೆಸಬೇಕು. ಯುವಕ ಯುವತಿಯರಿಗೆ ಉದ್ಯೋಗಾಧಾರಿತ ಕೌಶಲ ತರಬೇತಿಗಳನ್ನು ಆಯೋಜಿಸಬೇಕು ಎಂದು ಸೂಚಿಸಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ . ಗಡಿ ಗ್ರಾಮಗಳಲ್ಲಿ ಯುವ ಸಬಲೀಕರಣ ಇಲಾಖೆಯಿಂದ ಯುವಜನರಿಗಾಗಿ ವಿವಿಧ ಕಾರ್ಯಕ್ರಮ ಆಯೋಜಿಸಲು ಪ್ರಾಧಿಕಾರ ಸಹಕಾರ ನೀಡಲಿದೆ. ಶೇ 50 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಇರುವ ಶಾಲೆಯನ್ನು ಗುರುತಿಸಿ ₹50 ಲಕ್ಷದಿಂದ ₹1 ಕೋಟಿ ವರೆಗೆ ಅಭಿವೃದ್ಧಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಪ್ರಾಧಿಕಾರಕ್ಕೆ ಸಲ್ಲಿಸಿದರೆ ಕ್ರಮ ವಹಿಸಲಾಗುವುದು ಎಂದರು.

ಪ್ರಾಧಿಕಾರದ ವತಿಯಿಂದ 61 ಕಾಮಗಾರಿಗಳನ್ನು ₹13.13 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ 57 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಕನಕಪುರ ತಾಲ್ಲೂಕಿನಲ್ಲಿ ಎರಡು ಸಂಸ್ಕೃತಿಕ ಭವನಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಗುಣಮಟ್ಟದ ಕಾಮಗಾರಿ ಕೈಗೊಳ್ಳಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ. ರಾಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ಮಂಜುನಾಥ್ ತಿಳಿಸಿದರು.

## ಹೊರನಾಡು ಗಡಿ ಭಾಗದಲ್ಲಿ ಕನ್ನಡ (ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ) ಒಂದು ಅವಲೋಕನ ಆನ್‌ಲೈನ್ ಸರಣಿ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ದಿನಾಂಕ: 28–06–2021



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ಪ್ರಥಮ ಬಾರಿಗೆ ಕರ್ನಾಟಕ ಗಡಿ ಭಾಗದ ಕನ್ನಡಿಗರ ಪ್ರಸ್ತುತ ಸ್ಥಿತಿಗತಿ ಹಾಗೂ ಸವಾಲುಗಳ ಬಗ್ಗೆ ಒಂದು ವಿಶಿಷ್ಟವಾದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಮೂಲ ಆಶಯ ಮಹಾರಾಷ್ಟ್ರ ಹಾಗೂ ಕೇರಳದ ಗಡಿ ಭಾಗದಲ್ಲಿನ ಕನ್ನಡಿಗರ ಸ್ಥಿತಿಗತಿಯ ಬಗ್ಗೆ ಒಂದು ಸಮಗ್ರ ಅವಲೋಕನ ಮಾಡುವುದು. ಈ ಉಪನ್ಯಾಸ ಮಾಲೆಯಲ್ಲಿ ಎರಡು ರಾಜ್ಯಗಳ ನಾಲ್ವರು ವಿದ್ವಾಂಸರು ಪಾಲ್ಗೊಂಡು ಆ ಭಾಗದ ಕನ್ನಡಿಗರ / ಕನ್ನಡ ಸಂಘ ಸಂಸ್ಥೆಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯತೆಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನೊಳಗೊಂಡ ಉಪನ್ಯಾಸವನ್ನು ನೀಡಿದರು. ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆಯ ಸಿ.ಬಿ. ಖೇಡಗಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಗುರು ಲಿಂಗಪ್ಪ ಡಬಾಲೆರವರು ಹಾಗೂ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ತ ತಾಲ್ಲೂಕಿನ ಸಂಖದ ಶಿಕ್ಷಕ ಮಲಿಕಜಾನಶೇಖ, ಮಹಾರಾಷ್ಟ್ರ ಭಾಗದ ಗಡಿ ನಾಡಿನ ಕನ್ನಡಿಗರ ಪ್ರಸ್ತುತ ಸವಾಲುಗಳ ಬಗ್ಗೆ ಪರಿಚಯಾತ್ಮಕ ಉಪನ್ಯಾಸ ನೀಡಿದರು. ಹಾಗೆಯೇ ಕೇರಳ ರಾಜ್ಯದ ಕಣ್ಣೂರು ವಿಶ್ವವಿದ್ಯಾಲಯದ ಕಾಸರಗೋಡಿನ ಸರ್ಕಾರಿ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಡಾ. ರತ್ನಾಕರ ಮಲ್ಲಮೂಲೆರವರು ಹಾಗೂ ಕಾಸರಗೋಡು ಸರ್ಕಾರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಎ. ಶ್ರೀನಾಥ್ ರವರು ಕೇರಳ ಭಾಗದ ಕನ್ನಡಿಗರ ಸ್ಥಿತಿಗತಿಯ ಬಗ್ಗೆ ಸಮಗ್ರವಾದ ಚಿತ್ರಣವನ್ನು ನೀಡಿದರು. ಈ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪರವರ ಶುಭ ಸಂದೇಶದೊಂದಿಗೆ ಪ್ರಾರಂಭಿಸಲಾಯಿತು. ಈ ಅಂತರ್ಜಾಲ ಸಂವಾದ ಕಾರ್ಯಕ್ರಮದಲ್ಲಿ ಎಡನೀರು ಮಠದ ಪೂಜ್ಯ ಶ್ರೀಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ಹಿರಿಯ ಸಾಹಿತಿಗಳಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಒಳಗೊಂಡಂತೆ ಕರ್ನಾಟಕ ಗಡಿ ಭಾಗದ ಮತ್ತು ಹೊರ ರಾಜ್ಯದ ಅನೇಕ ಕನ್ನಡಪರ ಚಿಂತಕರು ಪಾಲ್ಗೊಂಡಿದ್ದರು. ಈ ಸಂವಾದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಅಂತೆಯೇ ಇನ್ನು ಮುಂದೆಯೂ ಸಹ ಮಹಾರಾಷ್ಟ್ರ, ಕೇರಳ, ಆಂಧ್ರ, ತೆಲಂಗಾಣ ಮತ್ತು ಗೋವಾ ಭಾಗದ ಕನ್ನಡಿಗರ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆಯೂ ಇಂತಹ ಅಂತರ್ಜಾಲ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರಾಧಿಕಾರವು ಯೋಜಿಸಿರುತ್ತದೆ.

**ಜಯದೇವಿತಾಯಿ ಲಿಗಾಡೆ ಹಾಗೂ ಕಯ್ಯಾರ ಕಿಞ್ಞಣ್ಣರೈ ಹೆಸರಿನಲ್ಲಿ ಪ್ರಶಸ್ತಿ ನೀಡಿಕೆ**

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಗೆ ಶ್ರಮಿಸುತ್ತಿರುವ ಇಬ್ಬರು ಮಹನೀಯರಿಗೆ ಜಯದೇವಿತಾಯಿ ಲಿಗಾಡೆ ಹಾಗೂ ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ ರವರು ತಿಳಿಸಿದರು.

ಹೊರ ನಾಡ ಗಡಿ ಭಾಗದಲ್ಲಿ ಕನ್ನಡ ಒಂದು ಅವಲೋಕನ (ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ) ವಿಷಯವಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ನಡೆಸಿದ ಆನ್‌ಲೈನ್ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಮಹನೀಯರಂತೆ ಕನ್ನಡ ನಾಡಿನ ಗಡಿಯಲ್ಲಿದ್ದು, ಕನ್ನಡ ಭಾಷೆ ಉಳಿಯುವಿಕೆಗೆ ಶ್ರಮಿಸಿ, ಕನ್ನಡದ ವಾತಾವರಣವನ್ನು ಇಂದಿಗೂ ಜೀವಂತವಾಗಿರಿಸಲು ಕಾರಣವಾದ ಗಣ್ಯರನ್ನು, ಚಿಂತಕರನ್ನು, ಸಾಹಿತಿಗಳನ್ನು ಗುರುತಿಸಿ, ಈ ಎರಡು ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತೇವೆ. ಪ್ರಶಸ್ತಿಯು ಕನಿಷ್ಠ 1 ಲಕ್ಷ ರೂ. ಹಾಗೂ ಪ್ರಶಸ್ತಿಪತ್ರವನ್ನು ಒಳಗೊಂಡಿರುತ್ತದೆ'ಎಂದು ತಿಳಿಸಿದರು.


**ಪ್ರತಿ ತಾಲ್ಲೂಕಿನಲ್ಲಿ ಸಾಂಸ್ಕೃತಿಕ ಉತ್ಸವ, ಸಾಧಕರ ಸಾಕ್ಷ್ಯಚಿತ್ರ** : ಕರ್ನಾಟಕದ ಎಲ್ಲ 63 ತಾಲೂಕು ಕೇಂದ್ರಗಳಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣದ ಜೊತೆಗೆ ಸಾಂಸ್ಕೃತಿಕ ಉತ್ಸವಗಳನ್ನು ನಡೆಸುವ ಬಗ್ಗೆಯೂ ಪ್ರಾಧಿಕಾರ ಚಿಂತನೆ ನಡೆಸುತ್ತದೆ. ವಿಚಾರಸಂಕಿರಣ/ಶಿಬಿರ/ ಕಮ್ಮಟಗಳನ್ನು ಏರ್ಪಡಿಸಿ ಗಡಿ ಪ್ರದೇಶಗಳಲ್ಲಿ ಕನ್ನಡದ ವಾತಾವರಣ ನಿರ್ಮಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಗಡಿ ನಾಡಿನ ಕನ್ನಡದ ಹಿರಿಯ ಚೇತನಗಳ ಸ್ಮರಣೆಗಾಗಿ ಸಾಧಕರ ಸಾಕ್ಷ್ಯಚಿತ್ರ ನಿರ್ಮಾಣ, ಗಡಿ ನಾಡಿನ ಜಾನಪದ ಉತ್ಸವಗಳ ಅಧ್ಯಯನಕ್ಕಾಗಿ ಅನುದಾನ, ದಾರ್ಶನಿಕರ ಸ್ಮಾರಕಗಳ ನಿರ್ಮಾಣ, ಜೀರ್ಣೋದ್ಧಾರ, ಗಡಿ ನಾಡ ಕುರಿತು ಸಂಶೋಧನೆ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದು ಚಿಂತನಾವ್ಯಾಪ್ತಿಯಲ್ಲಿವೆ. ಗಡಿ ನಾಡು ಅಭಿವೃದ್ಧಿ ಕುರಿತಂತೆ ಡಾ. ಬರಗೂರು ರಾಮಚಂದ್ರಪ್ಪ ಅವರು ನೀಡಿರುವ ವರದಿಯನ್ವಯ ಯೋಜನೆಗಳ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

**ಸ್ಥಳ ನಾಮಗಳ ಬದಲು ಬೇಡ:** ಕನ್ನಡಿಗರು ಹೆಚ್ಚಿರುವ ಕೇರಳದ ಕಾಸರಗೋಡಿನ ಕನ್ನಡದ ಸ್ಥಳ ನಾಮಗಳನ್ನು ಮಲಯಾಳಂಗೆ ಬದಲಿಸುವ ಅಲ್ಲಿಯ ಸರ್ಕಾರಕ್ಕೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಪತ್ರಬರೆದಿದ್ದಾರೆ. ಸ್ಥಳ ನಾಮಗಳು ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾಮಾಜಿಕ ಇತಿಹಾಸ ಹೊಂದಿರುತ್ತವೆ. ಈ ಹಿನ್ನೆಲೆಯಲ್ಲಿ ಸ್ಥಳ ನಾಮಗಳನ್ನು ಬದಲಿಸುವುದು ಬೇಡ ಎಂದು ಸಲಹೆನೀಡಿದ್ದಾರೆ ಎಂದೂ ಅವರು ಈ ಸಂದರ್ಭದಲ್ಲಿ ಮಾಹಿತಿ ನೀಡಿದರು. ಎಡನೀರುಸ್ವಾಮೀಜಿ ಆಶೀರ್ವಚನ ನೀಡಿದರು. ಆರಂಭದಲ್ಲಿ ಗಾಯಕಿ ಎಂ.ಡಿ.ಪಲ್ಲವಿ ಅವರು ಕವಿ ಡಿ.ಎಸ್. ಕರ್ಕಿ ಅವರ 'ಹಚ್ಚೇವು ಕನ್ನಡದ ದೀಪ' ಎಂಬ ಹಾಡಿನೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಗಡಿ ಪ್ರಾಧಿಕಾರದ ಕಾರ್ಯದರ್ಶಿ ಶ್ರೀ ಪ್ರಕಾಶ ಮತ್ತೀಹಳ್ಳಿರವರು ಎಲ್ಲರನ್ನು ಸ್ವಾಗತಿಸಿದರು. ಡಾ. ಬರಗೂರು ರಾಮಚಂದ್ರಪ್ಪ ಹಾಗೂ ಅನೇಕ ಕನ್ನಡಪರ ಚಿಂತಕರು ಭಾಗವಹಿಸಿದ್ದರು. ಶ್ರೀಮತಿ ಅಪರ್ಣಾ ಕಾರ್ಯಕ್ರಮ ನಿರೂಪಿಸಿದರು.




ಆನೇಕಲ್ ತಾ॥ ಬಳ್ಳೂರು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಚರಂಡಿ ನಿರ್ಮಾಣ


ಆನೇಕಲ್ ತಾಲ್ಲೂಕು ಮುಗಳೂರು ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕಾಮನಹಳ್ಳಿ
ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿ



ಕನಕಪುರ ತಾಲ್ಲೂಕು ಕೋಡಿಹಳ್ಳಿ ಗ್ರಾಮ ಪಂಚಾಯಿತಿಯ ಚಿಕ್ಕಬಳ್ಳಿ
ಗ್ರಾಮದ ಪರಿಮಿತಿಯಲ್ಲಿ ಕಾಂಕ್ರೀಟ್ ಚರಂಡಿ ಹಾಗೂ ರಸ್ತೆ ಕಾಮಗಾರಿ



ಕನಕಪುರ ತಾಲ್ಲೂಕು ಹೂಕುಂದ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಟಿ. ಗೊಲ್ಲಹಳ್ಳಿ
ಗ್ರಾಮದ ಪರಿಮಿತಿಯಲ್ಲಿ ಕಾಂಕ್ರೀಟ್ ಚರಂಡಿ ಹಾಗೂ ರಸ್ತೆ ಕಾಮಗಾರಿ




ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅನುದಾನದ ಅಡಿಯಲ್ಲಿ ನಿರ್ಮಿಸಿರುವ ಬೀದರ್ ಕರ್ನಾಟಕ ಸಾಹಿತ್ಯ ಸಂಘದ ಸಾಂಸ್ಕೃತಿಕ ಭವನ.



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅನುದಾನದ ಅಡಿಯಲ್ಲಿ ನಿರ್ಮಿಸಿರುವ ಬೀದರ್ ಕರ್ನಾಟಕ ಸಾಹಿತ್ಯ ಸಂಘದ ಸಾಂಸ್ಕೃತಿಕ ಭವನದ ಸಭಾಂಗಣ

KA/BG-GPO/2515/WPP-47/ 2009-2011

# ಕರ್ನಾಟಕ ರಾಜ್ಯಪತ್ರ

## ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ಪತ್ರಿಕೆ

| ಭಾಗ –IV-A | ಬೆಂಗಳೂರು, ಶನಿವಾರ, ಏಪ್ರಿಲ್ ೩, ೨೦೧೦(ಚೈತ್ರ ೧೩, ಶಕ ವರ್ಷ ೧೯೩೨) | ನಂ.೩೪ |
|---|---|---|

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 45 ಶಾಸನ 2009, ಬೆಂಗಳೂರು. ದಿನಾಂಕ: 3ನೇ ಏಪ್ರಿಲ್, 2010**

ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2010ಕ್ಕೆ 2010ರ ಏಪ್ರಿಲ್ ತಿಂಗಳ ಒಂದನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 12 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 12**

(2010ರ ಏಪ್ರಿಲ್ ಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)

**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಅಧಿನಿಯಮ, 2010**

(2010ರ ಏಪ್ರಿಲ್ ಒಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವೊಂದರ ಸ್ಥಾಪನೆಗೆ ಮತ್ತು ಕರ್ನಾಟಕ ಗಡಿ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕದ ಗಡಿ ಪ್ರದೇಶದ ಅಭಿವೃದ್ಧಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವೊಂದರ ಸ್ಥಾಪನೆಗೆ ಮತ್ತು ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ,

ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ–** (1) ಈ ಅಧಿನಿಯಮವನ್ನು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಾಧಿಕಾರ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ;

(ಬಿ) "ಗಡಿ ಪ್ರದೇಶ" ಎಂದರೆ ಅನುಸೂಚಿಯಲ್ಲಿ ನಮೂದಿಸಲಾಗಿರುವ ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವ ತಾಲ್ಲೂಕುಗಳು ಹಾಗೂ ಇತರ ಪ್ರದೇಶಗಳು;

(ಸಿ) "ಅಧ್ಯಕ್ಷ" ಎಂದರೆ ಪ್ರಾಧಿಕಾರದ ಅಧ್ಯಕ್ಷ;

(ಡಿ) "ಇಲಾಖೆ" ಎಂದರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ನಿಗಮ ಅಥವಾ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಯಾವುದೇ ಸಂಸ್ಥೆ ಅಥವಾ ನಿಕಾಯವೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು:

(ಇ) "ಸದಸ್ಯ" ಎಂದರೆ ಪ್ರಾಧಿಕಾರದ ಸದಸ್ಯ ;

(ಎಫ್)"ಯೋಜನೆಗಳು ಮತ್ತು ಕಾರ್ಯಕ್ರಮಗಳು" ಎಂದರೆ, ವಿವಿಧ ಇಲಾಖೆಗಳಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಗಾಗಿ ಪ್ರಾಧಿಕಾರದಿಂದ ಸಿದ್ಧಪಡಿಸಿದ ವಾರ್ಷಿಕ ಯೋಜನೆಗಳು ಮತ್ತು ಕಾರ್ಯಕ್ರಮಗಳು;

(ಜಿ) "ಕಾರ್ಯದರ್ಶಿ" ಎಂದರೆ ಪ್ರಾಧಿಕಾರದ ಕಾರ್ಯದರ್ಶಿ;

(ಹೆಚ್)"ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು;

## ಅಧ್ಯಾಯ–II

**3. ಪ್ರಾಧಿಕಾರದ ರಚನೆ :–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಪ್ರಾಧಿಕಾರವನ್ನು ರಚಿಸತಕ್ಕದ್ದು ಮತ್ತು ಅದರ ಕೇಂದ್ರ ಸ್ಥಳವು ಬೆಂಗಳೂರಿನಲ್ಲಿ ಇರತಕ್ಕದ್ದು.

(2) ಪ್ರಾಧಿಕಾರವು ಕರಾರು ಮಾಡಿಕೊಳ್ಳಲು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿ ಇರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು:–

(ಎ) ಗಡಿ ಪ್ರದೇಶ ಅಭಿವೃದ್ಧಿಗಾಗಿ ಕೆಲಸ ಮಾಡಿರುವಂತ ಸರ್ಕಾರದಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿಯು ಪ್ರಾಧಿಕಾರದ ಅಧ್ಯಕ್ಷರಾಗಿರತಕ್ಕದ್ದು.

(ಬಿ) ಗಡಿ ಪ್ರದೇಶಗಳ ಸಮಸ್ಯೆಗಳ ಅರಿವಿರುವ ಹಾಗೂ ಸಾಹಿತ್ಯ, ಆಡಳಿತ, ಶಿಕ್ಷಣ ಅಥವಾ ಕಾನೂನು ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಏಳು ಜನ ....ಸದಸ್ಯರು

(ಸಿ) ಸರ್ಕಾರದ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ....ಪದನಿಮಿತ್ತ ಸದಸ್ಯರು

(ಡಿ) ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು, ಮತ್ತು ಶಾಸನ ರಚನೆ ಇಲಾಖೆ ....ಪದನಿಮಿತ್ತ ಸದಸ್ಯರು

(ಇ) ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ....ಪದನಿಮಿತ್ತ ಸದಸ್ಯರು

(ಎಫ್) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ....ಪದನಿಮಿತ್ತ ಸದಸ್ಯರು

(ಜಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ....ಪದನಿಮಿತ್ತ ಸದಸ್ಯರು

(ಹೆಚ್) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ....ಪದನಿಮಿತ್ತ ಸದಸ್ಯ

(ಐ) ಅಧ್ಯಕ್ಷರು, ಕನ್ನಡ ಸಾಹಿತ್ಯ ಅಕಾಡೆಮಿ ....ಪದನಿಮಿತ್ತ ಸದಸ್ಯ

(ಜೆ) ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ....ಪದನಿಮಿತ್ತ ಸದಸ್ಯ

(ಕೆ) ಪ್ರಾಧಿಕಾರದ ಕಾರ್ಯದರ್ಶಿ ....ಸದಸ್ಯ – ಕಾರ್ಯದರ್ಶಿ

4. **ಪದಾವಧಿ ಮತ್ತು ಸೇವಾ ಷರತ್ತುಗಳು.**–(1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಅಧ್ಯಕ್ಷ ಮತ್ತು ಇತರೆ ಅಧಿಕಾರೇತರ ಸದಸ್ಯರುಗಳು ಮೂರು ವರ್ಷಗಳ ಅವಧಿಯವರೆಗೆ ಪದಧಾರಣಾ ಮಾಡತಕ್ಕದ್ದು. ಸರ್ಕಾರದ ಅಧಿಕಾರಿ ಸದಸ್ಯರಿಗೆ ಸಂಬಂಧಿಸಿದಂತೆ ಇದು ಅನ್ವಯವಾಗತಕ್ಕದ್ದಲ್ಲ.

(2) ಅಧ್ಯಕ್ಷರು ಅಥವಾ ಪದನಿಮಿತ್ತ ಸದಸ್ಯರ ಹೊರತಾಗಿ ಯಾವೊಬ್ಬ ಸದಸ್ಯರೂ ಅದಕ್ಕೆ ತಮ್ಮ ಸಹಿ ಹಾಕಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು. ಆದರೆ ಅವರ ರಾಜೀನಾಮೆಯು ಅಂಗೀಕಾರವಾಗುವವರೆಗೆ ಹುದ್ದೆಯಲ್ಲಿ ಮುಂದುವರೆಯತಕ್ಕದ್ದು

(3) ಅಧ್ಯಕ್ಷರ ಅಥವಾ ಯಾವೊಬ್ಬ ಸದಸ್ಯರ ಹುದ್ದೆಗಳಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಕ್ಕೆ ರಾಜ್ಯ ಸರ್ಕಾರವು ಒಬ್ಬ ವ್ಯಕ್ತಿಯನ್ನು ಸಂದರ್ಭಾನುಸಾರ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ನಾಮ ನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತರಾದ ಅಧ್ಯಕ್ಷ ಅಥವಾ ಸದಸ್ಯರು ತನಗಿಂತ ಮೊದಲಿದ್ದ ವ್ಯಕ್ತಿಯ ಪದಾವಧಿಯಲ್ಲಿ ಪೂರ್ಣವಾಗದೆ ಉಳಿದ ಭಾಗದವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಅಧ್ಯಕ್ಷರು ಮತ್ತು ಇತರೆ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(5) ಅಧ್ಯಕ್ಷರು ಮತ್ತು ಇತರೆ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

(6) ಪ್ರಾಧಿಕಾರದ ಯಾವುದೇ ಕ್ರಮ ಅಥವಾ ವ್ಯವಹರಣೆಯು ಪ್ರಾಧಿಕಾರದಲ್ಲಿ ಯಾವುದೇ ಖಾಲಿಸ್ಥಾನವಿರುವುದರಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

5. **ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ,**– (1) ಒಬ್ಬ ವ್ಯಕ್ತಿಯು, ಅವನು,–

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧ ನಿರ್ಣಿತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ, ಅಥವಾ

(ಬಿ) ಅಸ್ವಸ್ಥಚಿತ್ತದವನಾಗಿದ್ದು, ಹಾಗೆಂದು ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ : ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ : ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ: ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಮೇರೆಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತ: ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ:

(ಎಫ್)ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯಾವಾದಿಯಾಗಿ ನಿಯೋಜಿತನಾದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯಾವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಿ ನೇಮಿತನಾಗುವುದಕ್ಕೆ ಮತ್ತು ಸದಸ್ಯನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(2)ಯಾವೊಬ್ಬ ವ್ಯಕ್ತಿಯನ್ನು, ಆತನು ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಪ್ರಕಟಿಸಲಾಗಿರುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆ ಎಂಬ ಕಾರಣ ಮಾತ್ರದಿಂದಲೇ ಉಪಪ್ರಕರಣ (1)ರ (ಇ) ಖಂಡದ ಅಡಿಯಲ್ಲಿ ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಷೇರು ಅಥವಾ ಹಿತಾಸಕ್ತಿ ಹೊಂದಿರುವನೆಂದು ಭಾವಿಸತಕ್ಕದ್ದಲ್ಲ.

**6. ಸದಸ್ಯನನ್ನು ತೆಗೆದುಹಾಕುವುದು** .–(1) ರಾಜ್ಯ ಸರ್ಕಾರವು ಅಧ್ಯಕ್ಷ ಅಥವಾ ಇತರ ಸದಸ್ಯನನ್ನು ಅವನು,–

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಅಧ್ಯಕ್ಷ ಅಥವಾ ಸದಸ್ಯನನ್ನು ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಅವನು ಸದರಿ ಪ್ರಕರಣದ (1)ನೇ ಉಪ–ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ ತೆಗೆದುಹಾಕತಕ್ಕದ್ದಲ್ಲ ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ ; ಅಥವಾ

(ಸಿ) ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ : ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ತನ್ನ ಸ್ಥಾನವನ್ನು ಅವನು ದುರುಪಯೋಗ ಪಡಿಸಿಕೊಂಡಿದ್ದು, ಅವನನ್ನು ಆ ಪದದಲ್ಲಿ ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವುದೆಂದು ಕಂಡುಬಂದರೆ, –ಸದಸ್ವತ್ವದಿಂದ ಅವನನ್ನು ತೆಗೆದು ಹಾಕತಕ್ಕದ್ದು:

ಪರಂತು ಯಾವೊಬ್ಬ ಸದಸ್ಯರನ್ನು ಅವರಿಗೆ ಅಂಥ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

**7. ಕಾರ್ಯದರ್ಶಿ**–(1) ರಾಜ್ಯ ಸರ್ಕಾರವು, ಗ್ರೂಪ್–ಎ ದರ್ಜೆಗೆ ಕಡಿಮೆಯಿಲ್ಲದ ಒಬ್ಬ ಅಧಿಕಾರಿಯನ್ನು ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದು. ಕಾರ್ಯದರ್ಶಿಯು ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.(2)ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಕಾರ್ಯದರ್ಶಿಯವರಿಗೆ ರಜೆಗಳನ್ನು ಮಂಜೂರು ಮಾಡಬಹುದು.(3)ಕಾರ್ಯದರ್ಶಿಯು ಪ್ರಾಧಿಕಾರದ ಮುಖ್ಯ ನಿರ್ವಾಹಕರಾಗಿರತಕ್ಕದ್ದು;

(ಎ) ಪ್ರಾಧಿಕಾರದಿಂದ ಅನುಮೋದಿತವಾದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕದ್ದು;

(ಬಿ) ಪ್ರಾಧಿಕಾರದ ನಿಧಿಯನ್ನು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು;

(ಡಿ) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಲಾಗಿರುವಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ; ಮತ್ತು

(ಇ) ಅಧ್ಯಕ್ಷರು ತಪಾಸನೆ ಮಾಡುವ ಸಮಯದಲ್ಲಿ, ಕಚೇರಿಯ ದಾಖಲೆಗಳನ್ನು ಹಾಜರುಪಡಿಸಲು ಜವಾಬ್ದಾರನಾಗಿರತಕ್ಕದ್ದು.

**8. ಪ್ರಾಧಿಕಾರದ ಅಧಿಕಾರಿಗಳು ಮತ್ತು ಅವರ ಸೇವಾ ಷರತ್ತುಗಳು.**–(1) ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಪ್ರಾಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಪ್ರಾಧಿಕಾರವು ಅದರ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅವಶ್ಯವೆಂದು ಭಾವಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಬಹುದು ಅಥವಾ ಪ್ರತಿನಿಯೋಜಿಸಬಹುದು.

(2) ಮೇಲೆ ನಿರ್ದಿಷ್ಟಪಡಿಸಲಾದ ಅಧಿಕಾರಿಗಳ ಮತ್ತು ನೌಕರರ ಆಯ್ಕೆ ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**9. ಪ್ರಾಧಿಕಾರದ ಸಭೆಗಳು.**– (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಕರೆಯತಕ್ಕದ್ದು ಮತ್ತು ಅವು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ನಡೆಸತಕ್ಕದ್ದು.

(2) ಪ್ರಾಧಿಕಾರವು ಕಡೇ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅಧ್ಯಕ್ಷರು ವಿಶೇಷ ಸಭೆಯನ್ನು ಕರೆಯುವುದು ಅವಶ್ಯವೆಂದು ಭಾವಿಸಿದರೆ ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಅಂಥ ಸಭೆಯನ್ನು ಕರೆಯಬಹುದು.

(4) ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯಕಲಾಪದ ಸಂಬಂಧದಲ್ಲಿ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

(5) ಅಧ್ಯಕ್ಷರು ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದ ಅಧ್ಯಕ್ಷರಿಗೆ ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ಆರಿಸಲ್ಪಟ್ಟ ಯಾವುದೇ ಇತರ ಸದಸ್ಯರು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(6) ಗಣಪತಿ (ಕೋರಂ) ಆಗಲು ಒಂಬತ್ತು ಜನ ಸದಸ್ಯರಿರತಕ್ಕದ್ದು.

**10. ವ್ಯವಹಾರಗಳು ಸರಿಯಾಗಿವೆ ಮತ್ತು ಸಿಂಧುವಾಗಿವೆ ಎಂಬ ಪೂರ್ವಭಾವನೆ.**– ಪ್ರಾಧಿಕಾರದ ಯಾವುದೇ ಕ್ರಮ ಅಥವಾ ವ್ಯವಹರಣೆ ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಇರುವಾಗ ಅಂಥ ಕ್ರಮ ಅಥವಾ ವ್ಯವಹರಣೆಯು ಅಧ್ಯಕ್ಷರು ಅಥವಾ ಸದಸ್ಯನಾಗಿ ಕೆಲಸ ಮಾಡುತ್ತಿರುವ ಯಾವುದೇ ವ್ಯಕ್ತಿಯ ಅನರ್ಹತೆಯ ಕಾರಣದಿಂದ ಅಥವಾ ನೇಮಕಾತಿಯಲ್ಲಿನ ದೋಷದ ಕಾರಣದಿಂದ ದೋಷಪೂರಿತವಾಗುತ್ತದೆ ಎಂದು ಭಾವಿಸತಕ್ಕದಲ್ಲ.

**11. ಉಪಸಮಿತಿ.**– ಪ್ರಾಧಿಕಾರವು ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ತನ್ನ ಸದಸ್ಯರ ಪೈಕಿಯಿಂದ ಆರು ಜನರನ್ನು ಮೀರದಷ್ಟು ಸಂಖ್ಯೆಯ ಸದಸ್ಯರಿರುವ ಒಂದು ಉಪಸಮಿತಿಯನ್ನು ರಚಿಸಬಹುದು. ಪ್ರಾಧಿಕಾರದ ಅಧ್ಯಕ್ಷರು ಈ ಉಪಸಮಿತಿಯ ಅಧ್ಯಕ್ಷರು ಸಹ ಆಗಿರತಕ್ಕದ್ದು.

12. **ಉಪಸಮಿತಿಯ ಅಧಿಕಾರಗಳು ಮತ್ತು ಕರ್ತವ್ಯಗಳು.**– (1) ಉಪಸಮಿತಿಯು, ಪ್ರಾಧಿಕಾರವು ತನಗೆ ಪ್ರತ್ಯಾಯೋಜಿಸಲಾದಂಥ ಪ್ರಾಧಿಕಾರದ ಅಧಿಕಾರಿಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಉಪ ಸಮಿತಿಯು ಕಡೇಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಉಪಸಮಿತಿಯು, ಪ್ರಾಧಿಕಾರದ ನಿರ್ಧಾರಗಳನ್ನು ಸೂಕ್ತವಾಗಿ ಕಾರ್ಯಗತ ಗೊಳಿಸಲಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ನೋಡಲು ತುರ್ತು ಸ್ವರೂಪದ ವಿಷಯಗಳ ಬಗ್ಗೆ ಅಗತ್ಯ ನಿರ್ಧಾರ ಕೈಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರವು ತುರ್ತು ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸಲಹೆ ನೀಡತಕ್ಕದ್ದು.

(4) ಉಪಸಮಿತಿಯು, ತನ್ನ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಸಂಬಂಧದಲ್ಲಿ, ವಿನಿಯಮಗಳ ಮೂಲಕ ಉಪಸಂಬಂಧಿಸಬಹುದಾಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

13. **ತಜ್ಞರ ಸೇವೆಗಳನ್ನು ಪಡೆದುಕೊಳ್ಳುವುದು.–** (1) ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಪ್ರಾಧಿಕಾರವು ಅವಶ್ಯವಾದರೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಧಾನದಲ್ಲಿ ತಜ್ಞರ ಸೇವೆಗಳನ್ನು ಅಥವಾ ನೆರವನ್ನು ಪಡೆದುಕೊಳ್ಳಬಹುದು.

(2) ಅಂಥ ತಜ್ಞರು ಸಲ್ಲಿಸಿದ ಸೇವೆ ಅಥವಾ ನೆರವಿನ ಬಗ್ಗೆ ಸಂಧಾಯಮಾಡತಕ್ಕ ಗೌರವಧನ ಮತ್ತು ಭತ್ಯೆಗಳು, ನಿಯಮಗಳಲ್ಲಿ ಗೊತ್ತುಪಡಿಸಬಹುದಾದಂಥ ಮೊಬಲಾಗಿರತಕ್ಕದ್ದು.

## ಅಧ್ಯಾಯ–III

14. **ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು.–** (1) ಪ್ರಾಧಿಕಾರವು, ಪ್ರತಿವರ್ಷವೂ, ಗಡಿ ಪ್ರದೇಶಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮಾರ್ಪಾಟನ್ನು ಮಾಡಿ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು.

15. **ಪ್ರಾಧಿಕಾರದ ಪ್ರಕಾರ್ಯಗಳು.–** ಪ್ರಾಧಿಕಾರವು, ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು;–

(1) ಗಡಿ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದು. ಇದಲ್ಲದೆ, ನೆರೆಹೊರೆಯ ರಾಜ್ಯದ ಗಡಿ ಭಾಗಗಳಲ್ಲಿ ಕನ್ನಡ ಮಾತನಾಡುವ ಜನರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಯನ್ನು ಸುಧಾರಿಸುವುದು.

(2) ರಾಜ್ಯದ ಹೊರಭಾಗದ ಗಡಿಯಲ್ಲಿ ಅವಶ್ಯವಿರುವಷ್ಟು ಕನ್ನಡ ಶಾಲೆಗಳನ್ನು ತೆರೆಯಲು ಸಹಾಯ ಒದಗಿಸುವುದು. ನೆರೆ ರಾಜ್ಯದವರು ಕನ್ನಡ ಶಾಲೆಗಳನ್ನು ಮುಚ್ಚಿರುವಂತಹ ಗ್ರಾಮಗಳಲ್ಲಿ ಕನ್ನಡಿಗರಿಗೆ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಕನ್ನಡ ಮಾಧ್ಯಮದ ಶಾಲೆಗಳನ್ನು ತೆರೆಯುವುದು.ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡುವುದು.

(3) ಗಡಿ ಪ್ರದೇಶದಲ್ಲಿ ಕನ್ನಡದಲ್ಲಿ ಶಿಕ್ಷಣ ನೀಡುವುದಕ್ಕೆ ಅವಶ್ಯವಾದ ಶಿಕ್ಷಕರನ್ನು ನೇಮಕ ಮಾಡಲು ಸಹಾಯ ಮಾಡುವುದು. ಕನ್ನಡದಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳನ್ನು ಕಾಲಕಾಲಕ್ಕೆ ಒದಗಿಸುವುದು.

(4) ಕನ್ನಡಿಗರಿಗೆ–ಕನ್ನಡ ಭಾಷೆಯಲ್ಲಿ ದೈನಂದಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು–ಕನ್ನಡ ವೃತ್ತ ಪತ್ರಿಕೆಗಳು, ಮಾಸ ಪತ್ರಿಕೆಗಳು, ವಾರ ಪತ್ರಿಕೆಗಳು ಆ ಭಾಗಗಳಲ್ಲಿ ದೊರಕುವಂತೆ ಮಾಡಲು ಗ್ರಂಥಾಲಯಗಳನ್ನು ಗಡಿ ಭಾಗಗಳಲ್ಲಿ ಪ್ರಾರಂಭ ಮಾಡುವುದು.

(5) ಕನ್ನಡ ಭಾಷೆ ಬೆಳವಣಿಗೆ ದೃಷ್ಟಿಯಿಂದ ನೋಂದಣಿಯಾದ ಕನ್ನಡಪರ ಸಂಘಟನೆಗಳಿಗೆ–ವಾರ್ಷಿಕವಾಗಿ ಭಾಷಾ ಚಟುವಟಿಕೆಗಳನ್ನು ನಡೆಸಲು ಅನುದಾನ ನೀಡುವುದು.

(6) ಗಡಿ ಪ್ರದೇಶದಲ್ಲಿ ಕನ್ನಡಪರ ಸಂಘಟನೆಗಳು ಕನ್ನಡಪರವಾಗಿ ಕ್ರಿಯಾಶೀಲರಾಗಿ ಕೆಲಸ ಮಾಡುವಂತೆ ಮಾಡುವ ಉದ್ದೇಶದಿಂದ ಹೆಚ್ಚು ಹೆಚ್ಚು ಸಂಘಗಳನ್ನು ಗಡಿ ಭಾಗಗಳಲ್ಲಿ ಕಟ್ಟಲು ಮತ್ತು ಈ ಸಂಘಟನೆಗಳು ಭಾಷಾ ಉಪನ್ಯಾಸ ಮಾಲಿಕೆಗಳನ್ನು ಸಂಘಟಿಸಲು ಸಹಾಯ ಮಾಡುವ ದೃಷ್ಟಿಯಿಂದ ಪ್ರಚಾರ ಉಪನ್ಯಾಸ ಕಾರ್ಯಕ್ರಮಗಳನ್ನು ಕಾರ್ಯಕ್ರಮಗಳನ್ನು ನಡೆಸುವುದು.

(7) ಸಾಂಸ್ಕೃತಿಕ ಚಟುವಟಿಕೆಗಳನ್ನು ಗಡಿ ಪ್ರದೇಶಗಳಲ್ಲಿ ಹಮ್ಮಿಕೊಂಡು, ಗಡಿ ಕನ್ನಡಿಗರ ಸಾಂಸ್ಕೃತಿಕ ಅವಶ್ಯಕತೆಗಳನ್ನು ಪೂರೈಸುವುದು.

(8) ಕನ್ನಡ ಸಾಹಿತ್ಯ, ಚಲನಚಿತ್ರ, ನಾಟಕ, ಜಾನಪದ, ನೃತ್ಯ, ಯಕ್ಷಗಾನ, ಲವಾಣಿ, ಬಯಲಾಟ, ತೊಗಲುಬೊಂಬೆ ಆಟ, ಹರಿಕಥೆ, ಸಂಗೀತ, ಇತ್ಯಾದಿ ಕಲೆಗಳು ನಶಿಸಿಹೋಗದಂತೆ ಪ್ರದರ್ಶನಕ್ಕೆ ಸೂಕ್ತವಾದ ವೇದಿಕೆಗಳನ್ನು ಕಲ್ಪಿಸುವುದು.ರಾಜ್ಯದ ಗಡಿ ಭಾಗದ ತಾಲ್ಲೂಕುಗಳು ಹಾಗೂ ಗ್ರಾಮಗಳ ಕನ್ನಡಿಗರು ಈ ಕಲೆಗಳನ್ನು ಪ್ರದರ್ಶಿಸಲು ಸಾಂಸ್ಕೃತಿಕ ಭವನಗಳನ್ನು ಕಟ್ಟುವುದು.

(9) ಗಡಿ ಪ್ರದೇಶ ಹಾಗೂ ಹೊರನಾಡು ಉತ್ಸವಗಳನ್ನು ಹಮ್ಮಿಕೊಳ್ಳುವುದು, ಕನ್ನಡ ಭವನಗಳನ್ನು ಕಟ್ಟುವುದು, ಗಡಿ ಪ್ರದೇಶದ ಜನರ ಪರಿಸ್ಥಿತಿಯನ್ನು ಸುಧಾರಿಸಲು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು, ಅವರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದು.

(10) ಗಡಿ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನತೆಯ ಜೀವನ ಭದ್ರತೆಯ ದೃಷ್ಟಿಯಿಂದ ನೀಡಬಹುದಾದ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಿ ಸಂಬಂಧಿತ ಇಲಾಖೆಗಳ ಮೂಲಕ ನೆರವು ನೀಡುವುದು.

(11) ಗಡಿ ಪ್ರದೇಶಗಳಲ್ಲಿ ಕರಕುಶಲ ಕೈಗಾರಿಕೆ, ಗುಡಿ ಕೈಗಾರಿಕೆ ಹಾಗೂ ಇತರೆ ಉದ್ಯಮಗಳಿಗೆ ಪ್ರೋತ್ಸಾಹದಾಯಕ ಕ್ರಮ ಕೈಗೊಳ್ಳುವುದು.

(12) ಗಡಿ ಪ್ರದೇಶದ ಹಳ್ಳಿಗಳಿಗೆ ಕುಡಿಯುವ ನೀರು, ಆರೋಗ್ಯ, ವ್ಯವಸಾಯ, ನೀರಾವರಿ, ರಸ್ತೆ ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಆಯಾಯ ಇಲಾಖೆಗಳು ಒದಗಿಸುವುದನ್ನು ಮೇಲ್ವಿಚಾರಣೆ ಮಾಡುವುದು.

16. **ಅಧಿನಿಯಮದ ಉದ್ದೇಶಗಳನ್ನು ಅನುಷ್ಠಾನಗೊಳಿಸುವುದು.–** ಪ್ರಾಧಿಕಾರವು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಉಪ ವಿಭಾಗ ಮಟ್ಟದಲ್ಲಿ ಉಪವಿಭಾಗಧಿಕಾರಿ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಇವರ ಮೂಲಕ ಅಧಿನಿಯಮದ ಉದ್ದೇಶಗಳನ್ನು ಅನುಷ್ಠಾನಗೊಳಿಸತಕ್ಕದ್ದು.

**17. ಮಾಹಿತಿ ಪಡೆದುಕೊಳ್ಳುವುದು.–** ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ಯಾವ ಅಧಿಕಾರಿಯಿಂದಲಾದರೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಬಹುದು ಮತ್ತು ಪಡೆದುಕೊಳ್ಳಬಹುದು ಮತ್ತು ಅಂಥ ಅಧಿಕಾರಿಯು ಪ್ರಾಧಿಕಾರವು ಕೋರಬಹುದಾದ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

18. **ಪ್ರಾಧಿಕಾರದ ಸಲಹೆಗಳು.–** ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ತನ್ನ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡಬಹುದು.

**19. ಕರ್ತವ್ಯ ಲೋಪವನ್ನು ದಾಖಲಿಸುವ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸುವ ಅಧಿಕಾರ.–** ಪ್ರಾಧಿಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಥವಾ ಈಗಾಗಲೇ ಜಾರಿಯಲ್ಲಿರುವ ಯಾವುದೇ ಆದೇಶವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು ಮತ್ತು ನೌಕರರು ಉಲ್ಲಂಘಿಸಿದರೆ, ಅಂಥ ಉಲ್ಲಂಘನೆಯನ್ನು ಕರ್ತವ್ಯ ಲೋಪವೆಂದು ದಾಖಲಿಸತಕ್ಕದ್ದು ಮತ್ತು ಅಂಥ ವ್ಯಕ್ತಿಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ಸಲಹೆಗಳನ್ನು ನೀಡತಕ್ಕದ್ದು.

## ಅಧ್ಯಾಯ–IV

20.**ಪ್ರಾಧಿಕಾರದ ನಿಧಿ.–** (1) ಪ್ರಾಧಿಕಾರವು, ಪ್ರಾಧಿಕಾರದ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದು.

(2) ಈ ಮುಂದಿನವುಗಳು ಪ್ರಾಧಿಕಾರದ ನಿಧಿಯ ಒಂದು ಭಾಗವಾಗಿರತಕ್ಕದ್ದು ಅಥವಾ ಪ್ರಾಧಿಕಾರದ ನಿಧಿಗೆ ಸಂದಾಯವಾಗತಕ್ಕದ್ದು, ಎಂದರೆ;–

**(i)** ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾದ ಅಥವಾ ನಿಗಮಿತವಾಗಿರದ ಯಾವುದೇ ನಿಕಾಯ ಅಥವಾ ಯಾರೇ ವ್ಯಕ್ತಿಗಳು ಮಾಡುವ ಎಲ್ಲ ಅನುದಾನಗಳು, ಧನಸಹಾಯಗಳು, ದಾನಗಳು ಮತ್ತು ಕೊಡುಗೆಗಳು; ಮತ್ತು

**(ii)** ಯಾವುದೇ ರೀತಿಯ ಯಾವುದೇ ಮೂಲದಿಂದ ಪ್ರಾಧಿಕಾರದಿಂದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಇತರ ಎಲ್ಲ ಮೊತ್ತಗಳು:

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಹೂಡತಕ್ಕದ್ದು.

(4) ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಅದರ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯವಾಗತಕ್ಕ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**21. ರಾಜ್ಯ ಸರ್ಕಾರದಿಂದ ಅನುದಾನ–** (1) ರಾಜ್ಯ ಸರ್ಕಾರವು ಪ್ರತಿ ವರ್ಷ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊಬಲಗನ್ನು ಪ್ರಾಧಿಕಾರಕ್ಕೆ ಅನುದಾನ ನೀಡತಕ್ಕದ್ದು.

(2) ರಾಜ್ಯ ಸರ್ಕಾರವು ಪ್ರಾಧಿಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ವಾರ್ಷಿಕ ಬಜೆಟ್ಟಿನಲ್ಲಿ ಪ್ರಾಧಿಕಾರಕ್ಕೆ ಹಣಕಾಸಿನ ಹಂಚಿಕೆಗಳನ್ನು ಮಾಡಬಹುದು.

**22. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ–** (1) ಪ್ರಾಧಿಕಾರದ ನಿಧಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ನಿಯಮಗಳ ಅನುಸಾರವಾಗಿ ಇಡತಕ್ಕದ್ದು.

(2) ಪ್ರಾಧಿಕಾರವು ಗೊತ್ತುಪಡಿಸಬಹುದಾದಂಥ ಪ್ರಪತ್ರದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ತಯಾರಿಸತಕ್ಕದ್ದು.

(3) ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕ ಪರಿಶೋಧಕರಿಂದ ಪ್ರಾಧಿಕಾರದ ಲೆಕ್ಕಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(4) ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆಯ ಉದ್ದೇಶಗಳಿಗಾಗಿ ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅಧಿಕಾರ ಹೊಂದಿರತಕ್ಕದ್ದು.

(5) ಪ್ರಾಧಿಕಾರವು, ಲೆಕ್ಕ ಪರಿಶೋಧನೆಗಾಗಿ ಗೊತ್ತುಪಡಿಸಬಹುದಾದಂಥ ವೆಚ್ಚಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗ, ಪ್ರಾಧಿಕಾರವು ಲೆಕ್ಕ ಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾಪಟ್ಟಿಯ ಪ್ರತಿಯೊಂದನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ–V
## ಸಂಕೀರ್ಣ

**23. ವರದಿ–**ಪ್ರಾಧಿಕಾರವು, ನಿಯಮಿಸಬಹುದಾದಂಥ ದಿನಾಂಕಗಳ ಒಳಗೆ ಅಂಥ ರೀತಿಯಲ್ಲಿ ಮತ್ತು ಅಂಥ ಕಾಲಾಂತರಗಳಲ್ಲಿ ನಿಯಮಿಸಬಹುದಾದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.


**24. ಪ್ರಾಧಿಕಾರದ ಆಯವ್ಯಯ–** ಪ್ರಾಧಿಕಾರವು ಪ್ರತಿವರ್ಷ ಮುಂದಿನ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಅಂದಾಜನ್ನು ನಿಯಮಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಪ್ರಪತ್ರದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**25. ನಿಯಮಗಳ ರಚನಾಧಿಕಾರ– (1)** ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿರುವಾಗ ಅದರ ಪ್ರತಿಯೊಂದು ಸದನದ ಮುಂದೆ ಒಂದು ಅಥವಾ ಎರಡು ಅಥವಾ ಅದಕ್ಕೂ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ಅದರ ನಿಕಟ ತರುವಾಯದ ಅಧಿವೇಶನ ಮುಕ್ತಾಯವಾಗುವ ಮೊದಲು ಉಭಯ ಸದನಗಳೂ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಯಾವುದೇ ನಿಯಮ ರಚಿಸಬಾರದೆಂದು ನಿರ್ಧರಿಸಿದರೆ ಆ ತರುವಾಯ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದತಕ್ಕದ್ದಲ್ಲ. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಆ ಮೊದಲು ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**26. ವಿನಿಮಯಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ–** ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 26ನೇ ಪ್ರಕರಣ ಮೇರೆಗೆ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ವಿನಿಮಯಗಳನ್ನು ರಚಿಸಬಹುದು.

# ಕವಿ ವಾಣಿ




ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ
-ಆದಿಕವಿ ಪಂಪ




ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
-ಹುಯಿಲಗೋಳ ನಾರಾಯಣರಾವ್



ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾವಾತನ ಹೃದಯವು ತಲ್ಲಣಿಸುವುದಿಲ್ಲವೋ, ಅದು ಹೃದಯವಲ್ಲ, ಕಲ್ಲಿನ ಬಂಡೆ, ದೇಹವಲ್ಲ, ಮೋಟು ಮರ.
-ಆಲೂರು ವೆಂಕಟರಾಯರು



ತಾಯಿ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ
-ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ



ಎಲ್ಲಾದರು ಇರು, ಎಂತಾದರೂ ಇರು ಎಂದೆಂದಿಗು ನೀ ಕನ್ನಡವಾಗಿರು
-ರಾಷ್ಟ್ರಕವಿ ಕುವೆಂಪು



ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ಹಿಂದೆ ಮುಂದೆ ಎಂದೆ ಕರ್ನಾಟಕ ಒಂದೇ
ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ
- ದ.ರಾ. ಬೇಂದ್ರೆ.



ಕನ್ನಡವನುಳಿದೆನಗೆ । ಅನ್ಯಜೀವನವಿಲ್ಲ ಕನ್ನಡವೆ ಎನ್ನುಸಿರು । ಪೆತ್ತೆನ್ನ ತಾಯಿ
-ಬೆನಗಲ್ ರಾಮರಾವ್




ಕನ್ನಡದ ಗಡಿ ಕಾಯೆ, ಗುಡಿಕಾಯೆ, ನುಡಿಕಾಯೆ,
ಕಾಯಲಾರೆನೆ ಸಾಯೆ! ಓ ಬನ್ನಿ ಬನ್ನಿ!
- ಕಯ್ಯಾರ ಕಿಞ್ಞಣ್ಣ ರೈ



**ಕನ್ನಡ ತಾಯಿ ನುಡಿ, ಮನ್ನಿಸಿ ಮಾತನಾಡು ಅನ್ಯಕ್ಕೆ ಮರುಳಾಗದಿರು,**
**ಮರುಳೇ ನೀ ಕನ್ನಡಿಗನೆಂದು ಮರೀಬೇಡ**
- ಜಯದೇವಿ ತಾಯಿ ಲಿಗಾಡೆ




**ಕನ್ನಡದ ಗಡಿಗಳಿಂದ- ಬಂದಿಹಿರಿ, ಬಂದಿಹಿರಿ ಕನ್ನಡ ಮಣಿಗಳಿರ,**
**ಬಂದಿಹಿರಿ, ಕನ್ನಡ ದೇವಿಯಾರಾಧನೆಗೆ, ಇಂದು ಸ್ವಾಗತವು ನಿಮಗೆ !**
- ತೀ ನಂ ಶ್ರೀ



**ಕನ್ನಡವೆಂಬುದು ಕೆಚ್ಚಿಗೆ ನಚ್ಚಿಗೆ ಆತ್ಮಪ್ರತ್ಯಯದಂತಃಸ್ಸತ್ವಕೆ**
**ಕನ್ನಡ ಜನಗಣ ನಾಯಕ ಸ್ಫೂರ್ತಿಗೆ ಅಧಿದೈವದ ಹೆಸರು.**
-ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ



**ಕನ್ನಡ ನಾಡು, ನುಡಿ, ಜಲ, ಭಾಷೆ ಮತ್ತು ಗಡಿಯ ವಿಷಯದಲ್ಲಿ**
**ಎಂದೂ ರಾಜಿಯಾಗದಿರುವುದೇ ಕನ್ನಡಿಗರ ಸಂಕಲ್ಪವಾಗಬೇಕು**
-ಪಾಟೀಲ ಪುಟ್ಟಪ್ಪ



**ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಿಸಾಕಿದ್ರೂನೆ -**
**ಮೂಗ್ನಲ್ ಕನ್ನಡ್ ಪದವಾಡ್ತೀನಿ! ನನ್ ಮನಸನ್ ನೀ ಕಾಣೆ!**
-ಜಿ.ಪಿ. ರಾಜರತ್ನಂ



**ಹೊತ್ತಿತೋ ಹೊತ್ತಿತು ಕನ್ನಡದ ದೀಪ**
**ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ..**
-ಸಿದ್ಧಯ್ಯ ಪುರಾಣಿಕ



**ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ**
-ಚನ್ನವೀರ ಕಣವಿ


**ಪ್ರಕಟಣೆ : ಕಾರ್ಯದರ್ಶಿಗಳು**
**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**
ಫೆಡರೇಷನ್ ಹೌಸ್, ಚೇಂಬರ್ ಆಫ್ ಕಾಮರ್ಸ್, 3ನೇ ಮಹಡಿ, ಕೆ.ಜಿ. ರೋಡ್,
ಬೆಂಗಳೂರು–560009 ದೂರವಾಣಿ ಸಂಖ್ಯೆ: (ಕ) 080 22352044,
ವೆಬ್‌ಸೈಟ್: kbada.karnataka.gov.in, ಮಿಂಚಂಚೆ : secretarygadi@karnataka.gov.in